# ಟೆಕ್ಸ್‌ಟೈಲ್ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್.

ಆಡಳಿತ ಕಛೇರಿ: 2ನೇ ಮಹಡಿ, ದೇವಾಂಗ ಮಾರ್ಕೆಟ್, ಜುಮ್ಮಾ ಮಸೀದಿ ರಸ್ತೆ, ಬೆಂಗಳೂರು-560 002.

## 2018–19ನೇ ಸಾಲಿನ 56ನೇ ಸಾಮಾನ್ಯ ಸರ್ವ ಸದಸ್ಯರ ವಾರ್ಷಿಕ ಸಭೆಯ ನೋಟೀಸು.

2018–19 ನೇ ಸಾಲಿನ 56ನೇ ಸರ್ವ ಸದಸ್ಯರ ವಾರ್ಷಿಕ ಸಭೆಯನ್ನು ಬೆಂಗಳೂರು ದೇವಾಂಗ ಹಾಸ್ಟೆಲ್ ರಸ್ತೆಯಲ್ಲಿರುವ, ದೇವಾಂಗ ಸಂಘದ ಪತಿಯಪ್ಪ ಭವನದಲ್ಲಿ (ಬೆಂಗಳೂರು ಮಹಾನಗರ ಪಾಲಿಕೆ ಕಛೇರಿ ಹಿಂಭಾಗ), ದಿನಾಂಕ: 15–09–2019 ರಂದು ಭಾನುವಾರ ಬೆಳಿಗ್ಗೆ 10.30 ಘಂಟೆಗೆ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಡಿ.ಹೆಚ್.ಜಗನ್ನಾಥ್‌ರವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ. ಮಾನ್ಯ ಸದಸ್ಯರೆಲ್ಲರೂ ಸಕಾಲಕ್ಕೆ ದಯಮಾಡಿಸಿ ಸಭೆಯ ಕಾರ್ಯ ಕಲಾಪಗಳನ್ನು ನಡೆಸಿಕೊಡಬೇಕೆಂದು ಪ್ರಾರ್ಥಿಸುತ್ತೇವೆ.

### ಕಾರ್ಯಸೂಚಿ

1. ಪ್ರಾರ್ಥನೆ.
2. ಸ್ವಾಗತ ಭಾಷಣ.
3. ಸಭೆಯ ನೋಟೀಸನ್ನು ಓದಿ ರೆಕಾರ್ಡ್ ಮಾಡುವುದು. (ನಿ.ಮ.ವ.ಪು : 1)
4. 2017–18ನೇ ಸಾಲಿನ ಸರ್ವ ಸದಸ್ಯರ ಸಭೆಯ ಕಲಾಪಗಳನ್ನು ಓದಿ ಖಾಯಂ ಮಾಡುವುದು. (ಆ.ವ.ಪು : 1–22)
5. 2018–19ನೇ ಸಾಲಿನ ನಿರ್ದೇಶಕ ಮಂಡಳಿ ವರದಿ ಅಂಗೀಕರಿಸುವುದು. (ನಿ.ಮ.ವ.ಪು : 6–14)
6. 2018–19ನೇ ಸಾಲಿನ ಲೆಕ್ಕ ಪರಿಶೋಧನೆಯಾದ ಲೆಕ್ಕ ಪತ್ರಗಳ ಪರಿಶೀಲನೆ ಮತ್ತು ಅನುಮೋದನೆ ಹಾಗೂ ಲೆಕ್ಕ ಪರಿಶೋಧನಾ ವರದಿ ಮತ್ತು ವರದಿಗೆ ನಿರ್ದೇಶಕ ಮಂಡಳಿಯವರು ನೀಡಿರುವ ಸಮಾಧಾನಗಳನ್ನು ಪರಿಶೀಲಿಸಿ ಅಂಗೀಕರಿಸುವುದು. (ಆ.ವ.ಪು : 23–ಕಡೆ ಪುಟದವರೆಗು)
7. 2018–19ನೇ ಸಾಲಿನಲ್ಲಿ ಬಡ್ಜೆಟ್ ಮಂಜೂರಾತಿಗಿಂತ ಹೆಚ್ಚುವರಿ ಖರ್ಚಾಗಿರುವ ಬಾಬತ್ತಿನ ಅನುಮೋದನೆ. (ನಿ.ಮ.ವ.ಪು : 15)
8. 2018–19ನೇ ಸಾಲಿನ ನಿವ್ವಳ ನಫೆ ವಿಲೇವಾರಿ ಮತ್ತು ಲಾಭಾಂಶ (ಡಿವಿಡೆಂಡ್) ಘೋಷಣೆಗೆ ಮಂಜೂರಾತಿ ನೀಡುವುದು. (ನಿ.ಮ.ವ.ಪು : 16)
9. 2019–20ನೇ ಸಾಲಿಗೆ ಬಡ್ಜೆಟ್ ಮಂಜೂರಾತಿ ಪಟ್ಟಿಯನ್ನು ಅಂಗೀಕರಿಸುವುದು. (ನಿ.ಮ.ವ.ಪು : 17–18)

10. 2019–20ನೇ ಸಾಲಿಗೆ ಲೆಕ್ಕ ಪರಿಶೋಧನೆಗೆ, ಲೆಕ್ಕ ಪರಿಶೋಧಕರನ್ನು ನೇಮಿಸುವುದು ಹಾಗೂ ಅವರುಗಳ ಸಂಭಾವನೆ ನಿಗಧಿಪಡಿಸುವುದು. (ನಿ.ಮ.ವ.ಪು : 18)

11. ಸಹಕಾರ ಸಂಘಗಳ ಜಂಟಿ ನಿಬಂಧಕರು ಪ್ರಕರಣ 64ಕ್ಕೆ ಪ್ರಕರಣ 68ರಡಿಯಲ್ಲಿ ನೀಡಿರುವ ಆದೇಶದ ಬಗ್ಗೆ (ಆ.ವ.ಪು : 89–94)

12. ಬ್ಯಾಂಕಿನ ಮುಂಬರುವ ವರ್ಷದ ಕಾರ್ಯ ಚಟುವಟಿಕೆಗಳ ಬಗ್ಗೆ ಆಡಳಿತ ಮಂಡಳಿಯ ರೂಪು ರೇಷೆ. (ನಿ.ಮ.ವ.ಪು : 18–19)

13. ಬ್ಯಾಂಕಿನ ಅಧಿಕೃತ ಷೇರು ಬಂಡವಾಳಕ್ಕೆ ಸಭೆಯು ನೀಡಿದ್ದ ಅನುಮತಿಯನ್ನು ಮುಂದುವರಿಸುವ ಬಗ್ಗೆ. (ನಿ.ಮ.ವ.ಪು : 19)

14. ನಿರ್ದೇಶಕರುಗಳಿಗೆ ಅವರ ಹತ್ತಿರದ ಸಂಬಂಧಿಗಳಿಗೆ ಮತ್ತು ಅವರ ಹಿತಾಸಕ್ತಿ ಇರುವ ಸಂಸ್ಥೆಗಳಿಗೆ ನೀಡಿದ್ದ ಸಾಲಗಳು ಮತ್ತು ಇದರ ಸುಸ್ತಿ ಸಾಲಗಳು ಏನಾದರೂ ಇದ್ದಲ್ಲಿ ಅವುಗಳ ವಸೂಲಾತಿಗೆ ತೆಗೆದುಕೊಂಡ ಕ್ರಮಗಳ ಪರಿವೀಕ್ಷಣೆ. (ನಿ.ಮ.ವ.ಪು : 19)

15. ನಿರ್ದೇಶಕರು ಬ್ಯಾಂಕಿನ ಸೇವೆಗಳನ್ನು ಉಪಯೋಗಿಸಿಕೊಂಡಿರುವುದರ ಬಗ್ಗೆ ಅವಲೋಕಿಸುವುದು. (ನಿ.ಮ.ವ.ಪು : 19)

16. ಬ್ಯಾಂಕಿನ ಉಪ ನಿಯಮಗಳಿಗೆ ಮಾಡಬೇಕಾದ ತಿದ್ದುಪಡಿಗಳ ಅನುಮೋದನೆ (ನಿ.ಮ.ವ.ಪು : 20)

17. ಅಧ್ಯಕ್ಷರ ಅಪ್ಪಣೆ ಮೇರೆಗೆ ಸದಸ್ಯರಿಂದ ಬರಬಹುದಾದ ನಿರ್ಣಯಗಳು ಮತ್ತು ಸೂಚಿಸಬಹುದಾದ ವಿಷಯಗಳು.

18. ವಂದನಾರ್ಪಣೆ.

**ನಿರ್ದೇಶಕ ಮಂಡಳಿ ಅಪ್ಪಣೆ ಮೇರೆಗೆ**

**ಸಹಿ/–**

**ಬೆಂಗಳೂರು**
**ತಾ: 14/08/2019**

**ಡಿ. ಸಂಜೀವಣ್ಣ**
ಮುಖ್ಯ ಕಾರ್ಯನಿರ್ವಾಹಕರು (ಪ್ರ).

**ಸೂಚನೆ:** ನಿ.ಮ.ವ.ಪು – ನಿರ್ದೇಶಕ ಮಂಡಳಿ ವರದಿ ಪುಟ ಸಂಖ್ಯೆ.
ಆ.ವ.ಪು – ಆಡಿಟ್ ವರದಿ ಪುಟ ಸಂಖ್ಯೆ.

## ಸದಸ್ಯರುಗಳಿಗೆ ವಿಶೇಷ ಸೂಚನೆ

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಕಾಯಿದೆ 2014 (ಅಧಿನಿಯಮ 35) ಮತ್ತು (ತಿದ್ದುಪಡಿ) ನಿಯಮ, 2015ರ ಪ್ರಕಾರ ಈ ಕೆಳಕಂಡ ಸದಸ್ಯರುಗಳಿಗೆ ಮಹಾ ಸಭೆಯ ನಡಾವಳಿಗಳಲ್ಲಿ ಪಾಲ್ಗೊಳ್ಳುವ ಮತ್ತು ಯಾವುದೇ ವಿಷಯಕ್ಕೆ ಮತ ಹಾಕುವ ಹಕ್ಕಿರುವುದಿಲ್ಲ.

1. ಸುಸ್ತಿ ಸಾಲಗಾರ ಸದಸ್ಯರುಗಳಿಗೆ.
2. ಹಿಂದಿನ ಸತತ ಐದು ವಾರ್ಷಿಕ ಸರ್ವ ಸದಸ್ಯರ ಸಭೆಗಳಲ್ಲಿ ಕನಿಷ್ಟ 3 ಸಭೆಗಳಿಗೆ ಹಾಜರಾಗದೆ ಇರುವ ಸದಸ್ಯರುಗಳಿಗೆ.
3. ಹಿಂದಿನ ವರ್ಷದಲ್ಲಿ ಕನಿಷ್ಠ ವ್ಯವಹಾರವನ್ನು ನಡೆಸಲು ಅಥವಾ ಬ್ಯಾಂಕು ನೀಡುವ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಪಡೆಯಲು ವಿಫಲರಾದ ಸದಸ್ಯರುಗಳು.

## ಸದಸ್ಯರ ಗಮನಕ್ಕೆ

1. ಬೈಲಾ ನಂ.45ರ ಪ್ರಕಾರ ಬ್ಯಾಂಕಿಗೆ ಸಂಬಂಧಪಟ್ಟ ಬೇರಾವುದೇ ವಿಷಯದಲ್ಲಿ ಹೆಚ್ಚಿನ ಸಮಜಾಯಿಷಿ ಅಥವಾ ವಿವರಗಳು ಬೇಕೆಂದು ಬಯಸಿದರೆ ಸಂಬಂಧಪಟ್ಟ ಸುಸ್ತಿದಾರರಲ್ಲದ ಸದಸ್ಯರು ಕಡೇ ಪಕ್ಷ 7 ದಿನಗಳ ಮುಂಚೆಯಾದರೂ ಅಂದರೆ ದಿನಾಂಕ: 08.09.2019 ರೊಳಗಾಗಿ ದಯವಿಟ್ಟು ಬ್ಯಾಂಕಿಗೆ ಲಿಖಿತ ಮೂಲಕ ತಿಳಿಸತಕ್ಕದ್ದು.
2. ಷೇರು ಖಾತೆಯಲ್ಲಿ ಸಹಿ ಹಾಕದಿರುವವರು ಸಹಿ ಹಾಕತಕ್ಕದ್ದು ಮತ್ತು ನಾಮಿನೇಷನ್ ಸೂಚನೆ ಮಾಡದೇ ಇರತಕ್ಕವರು ತಮ್ಮ ಹಿತದೃಷ್ಟಿಯಿಂದ ನಾಮಿನಿಯ ಹೆಸರನ್ನು ಸೂಚಿಸತಕ್ಕದ್ದು. ಷೇರು ಸರ್ಟಿಫಿಕೇಟುಗಳನ್ನು ತೆಗೆದುಕೊಳ್ಳದೆ ಇರುವ ಸದಸ್ಯರು ದಯವಿಟ್ಟು ತೆಗೆದುಕೊಳ್ಳುವುದು.
3. ದಿನಾಂಕ: 27.09.1991 ರಂದು ನಡೆದ ಸರ್ವ ಸದಸ್ಯರ ಸಭೆಯಲ್ಲಿ ತೀರ್ಮಾನವಾದಂತೆ ಆಡಿಟ್ ಆದ ಲೆಕ್ಕ ಪತ್ರಗಳ ಜಮಾ-ಖರ್ಚು ತಃಖ್ತೆ, ಆಸ್ತಿ-ಜವಾಬ್ದಾರಿ ತಃಖ್ತೆ, ಲಾಭ-ನಷ್ಟದ ತಃಖ್ತೆ, ಆಡಿಟ್‌ರವರ ವರದಿ ಹಾಗೂ ವರದಿಗೆ ನೀಡಿರುವ ಸಮಾಜಾಯಿಷಿಗಳ ಪ್ರತಿಯನ್ನು ಇಚ್ಛಿಸುವ ಸದಸ್ಯರು ಬ್ಯಾಂಕಿನಲ್ಲೇ ದಿನಾಂಕ: 31.08.2019ರಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.
4. ಸಭೆಗೆ ಹಾಜರಾದ ಎಲ್ಲಾ ಸದಸ್ಯರು ತಪ್ಪದೇ ಹಾಜರಿ ಪುಸ್ತಕದಲ್ಲಿ ಸಹಿ ಹಾಕತಕ್ಕದ್ದು.
5. ಗುರುತಿನ ಚೀಟಿಯನ್ನು ಪಡೆಯದಿರುವ ಸದಸ್ಯರು ತಮ್ಮ ಭಾವಚಿತ್ರವನ್ನು ಕೂಡಲೇ ಬ್ಯಾಂಕಿಗೆ ನೀಡಿ ಪಡೆಯಬಹುದು ಹಾಗೂ ಗುರುತಿನ ಚೀಟಿ ಪಡೆದಿರುವ ಸದಸ್ಯರು ಸರ್ವಸದಸ್ಯರ ಸಭೆಗೆ ಬರುವಾಗ ತಪ್ಪದೆ ತರಬೇಕಾಗಿ ವಿನಂತಿ, ವಿಳಾಸ ಬದಲಾವಣೆಯಾಗಿದ್ದರೆ ತಕ್ಷಣ ಬ್ಯಾಂಕಿಗೆ ತಿಳಿಸುವುದು.
6. ಹಿಂದಿನ ಸಾಲುಗಳ ಡಿವಿಡೆಂಡನ್ನು ಇನ್ನೂ ತೆಗೆದುಕೊಳ್ಳದೆ ಇರುವ ಸದಸ್ಯರು ದಯವಿಟ್ಟು ತೆಗೆದುಕೊಳ್ಳುವುದು. ಇಲ್ಲದಿದ್ದರೆ ಈ ಮೊದಲೇ ತಿಳಿಸಿರುವಂತೆ ಬೈಲಾ ಸಂಖ್ಯೆ 103ರ ಪ್ರಕಾರ ಪಾವತಿಯಾಗದ ಡಿವಿಡೆಂಡನ್ನು ಆಪದ್ಧನ ನಿಧಿಗೆ ವರ್ಗಾಯಿಸುವುದು.

7. ಸದಸ್ಯರುಗಳು ಉಳಿತಾಯ/ಚಾಲ್ತಿ ಖಾತೆಗಳನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು, ಇದು ಸಂವಿಧಾನದ ತಿದ್ದುಪಡಿ ಕಾಯಿದೆ ಪ್ರಕಾರವು ಕಡ್ಡಾಯವಾಗಿರುತ್ತದೆ. ಹಾಗೂ ತಮ್ಮ ಸದಸ್ಯತ್ವದ ಡಿವಿಡೆಂಡ್‌ನ್ನು ವರ್ಗಾಯಿಸಲು ಅನುಕೂಲವಾಗುವುದು.

8. ಬ್ಯಾಂಕಿನ ಸುವರ್ಣ ಮಹೋತ್ಸವದ ನೆನಪಿಗಾಗಿ ಸದಸ್ಯರುಗಳಿಗೆ ಬೆಳ್ಳಿ ನಾಣ್ಯವನ್ನು ಈಗಲೂ ಸಹ ನೀಡುತ್ತಿದ್ದು, ಇನ್ನೂ ಪಡೆಯದೆ ಇರುವ ಸದಸ್ಯರು ಗುರುತಿನ ಚೀಟಿಯ ನಕಲನ್ನು ನೀಡಿ ಬ್ಯಾಂಕಿನ ಮಧ್ಯಾಹ್ನದ ವ್ಯವಹಾರದ ವೇಳೆಯಲ್ಲಿ ಪಡೆದುಕೊಳ್ಳುವುದು.

**9. ಸದಸ್ಯರುಗಳ ಹೆಸರಿನಲ್ಲಿರುವ ಗಡು ಠೇವಣಿ, ಮಂಗಳನಿಧಿ ಠೇವಣಿ ಹಾಗೂ ಆವರ್ತಕ ಠೇವಣಿ (Recurring) ಗಳಿಂದ ಕ್ರೋಢೀಕೃತವಾಗಿ ಗಳಿಸುವ ಬಡ್ಡಿ ಮೊತ್ತ ಒಂದು ವರ್ಷದಲ್ಲಿ ರೂ. 40,000/– ಹಾಗೂ ಹಿರಿಯ ನಾಗರಿಕರು ರೂ. 50,000/–ಗಳು ಅಥವಾ ಅದಕ್ಕೂ ಮೇಲ್ಪಟ್ಟು ಗಳಿಸಿದಾಗ ಕಡ್ಡಾಯವಾಗಿ ಟಿ.ಡಿ.ಎಸ್. ಕಟಾವು ದಿನಾಂಕ: 01.04.2019 ರಿಂದ ಮಾಡಬೇಕಾಗಿರುತ್ತದೆ. ಇದಕ್ಕೆ ಠೇವಣಿದಾರರ ಪಾನ್ ಸಂಖ್ಯೆ ಅಗತ್ಯವಾಗಿರುತ್ತದೆ. ಪಾನ್ ಇಲ್ಲದಿದ್ದ ಪಕ್ಷದಲ್ಲಿ ಶೇ.20 ರಂತೆ ಟಿ.ಡಿ.ಎಸ್. ಕಟಾವು ಮಾಡಬೇಕಾಗಿರುತ್ತದೆಂದು ಆದಾಯ ತೆರಿಗೆ ಇಲಾಖೆಯವರು ಆದೇಶಿಸಿರುತ್ತಾರೆ.**

**10. (DEAF) ಡಿಪಾಸಿಟ್ ಎಜುಕೇಷನ್ ಅವೇರ್‌ನೆಸ್ ಫಂಡ್.**

**ಗ್ರಾಹಕರುಗಳು ಬ್ಯಾಂಕಿನಲ್ಲಿ ಹೊಂದಿರುವ ಯಾವುದೇ ಠೇವಣಿ ಖಾತೆಗಳಲ್ಲಿ ಅಥವಾ ವಾಯಿದೆ ಮುಗಿದು 10 ವರ್ಷಗಳ ಕಾಲ ವ್ಯವಹರಿಸದ ಖಾತೆಗಳಲ್ಲಿನ ಹಣವನ್ನು ಕಡ್ಡಾಯವಾಗಿ ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆಯ ಪ್ರಕಾರ ಅವರಿಗೆ ಕಳುಹಿಸಬೇಕಾಗಿರುತ್ತದೆ. ಇದಕ್ಕೆ ಅವಕಾಶ ನೀಡದಂತೆ ನಿಗಾ ವಹಿಸಲು ಸದಸ್ಯರುಗಳ ಗಮನಕ್ಕೆ ತರುತ್ತಿದ್ದೇವೆ.**

11. ಭಾರತೀಯ ರಿಸರ್ವ್ ಬ್ಯಾಂಕಿನ ನಿಮ್ಮ ಗ್ರಾಹಕರನ್ನು ಅರಿಯಿರಿ ಎಂಬ ಸುತ್ತೋಲೆಯಲ್ಲಿ ತಿಳಿಸಿರುವಂತೆ ಬ್ಯಾಂಕಿನಲ್ಲಿ ಉಳಿತಾಯ/ಚಾಲ್ತಿ, ಇತರೇ ಖಾತೆಗಳನ್ನು ತೆರೆಯಲು ಇಚ್ಛಿಸುವ ಗ್ರಾಹಕರು ತಮ್ಮ ಪಾಸ್‌ಪೋರ್ಟ್/ಪ್ಯಾನ್ ಕಾರ್ಡ್ / ವಾಹನ ಚಾಲನೆ ಅನುಮತಿ ಪತ್ರ / ಚುನಾವಣೆ ಆಯೋಗದ ಗುರುತಿನ ಚೀಟಿ / ಆಧಾರ್ ಕಾರ್ಡು ಇಂತಹವುಗಳನ್ನು ಅವರ ಭಾವಚಿತ್ರದೊಂದಿಗೆ ಕಡ್ಡಾಯವಾಗಿ ನೀಡಬೇಕು. ಈ ಮಾಹಿತಿಯನ್ನು ನೀಡಿ ತಮ್ಮ ಖಾತೆಯಲ್ಲಿನ ವಿವರಗಳನ್ನು ಪೂರ್ಣಗೊಳಿಸುವುದು.

12. ಈ ಸುತ್ತೋಲೆಯಲ್ಲಿನ ಕಾಯಿದೆಯು ಈಗಾಗಲೇ ಹೊಂದಿರುವ ಹಳೆಯ ಖಾತೆದಾರರಿಗೂ ಅನ್ವಯವಾಗುತ್ತದೆ. ಆದ್ದರಿಂದ ಹಳೆಯ ಖಾತೆದಾರರೂ ಸಹ ಪ್ಯಾನ್ ಹಾಗೂ ಆಧಾರ್ ದಾಖಲೆಗಳನ್ನು ಬ್ಯಾಂಕಿಗೆ ಸಲ್ಲಿಸಿ ತಮ್ಮ ಖಾತೆಗಳನ್ನು ಕ್ರಮಗೊಳಿಸಬೇಕಾಗಿ ಕೋರುತ್ತೇವೆ.

13. ಉಳಿತಾಯ / ಚಾಲ್ತಿ ಖಾತೆ ಹೊಂದಿರುವ ಖಾತೆದಾರರು ತಮ್ಮ ಆಧಾರ್ ಸಂಖ್ಯೆಯನ್ನು ಖಾತೆಗಳಿಗೆ ಜೋಡಣೆ ಮಾಡುವುದು ಕಡ್ಡಾಯವಾಗಿರುತ್ತದೆ. ಆದುದರಿಂದ ಜೋಡಣೆ ಮಾಡದ ಖಾತೆದಾರರು ಕೂಡಲೇ ತಮ್ಮ ಆಧಾರ್ ಸಂಖ್ಯೆಯನ್ನು ತಮ್ಮ ಖಾತೆಗಳಲ್ಲಿ ಜೋಡಣೆ ಮಾಡುವುದು.

**ಇದೇ ದಿನ ಲಘು ಉಪಹಾರವನ್ನು ಬೆಳಗ್ಗೆ 9.00 ರಿಂದ 10.30 ಘಂಟೆಯ ವರೆಗೆ ಏರ್ಪಡಿಸಲಾಗಿದೆ.**

# ಟೆಕ್ಸ್‌ಟೈಲ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಆಡಳಿತ ಕಛೇರಿ: 2ನೇ ಮಹಡಿ, ದೇವಾಂಗ ಮಾರ್ಕೆಟ್, ಜುಮ್ಮಾ ಮಸೀದಿ ರಸ್ತೆ, ಬೆಂಗಳೂರು – 560 002.

## 2018-19ನೇ ಸಾಲಿನ ನಿರ್ದೇಶಕ ಮಂಡಳಿ ಸದಸ್ಯರು

| | | |
|---|---|---|
| 1. | ಶ್ರೀ. ಡಿ. ಹೆಚ್. ಜಗನ್ನಾಥ್‌ರವರು (ದೊಮ್ಮಸಂದ್ರ) | ಅಧ್ಯಕ್ಷರು |
| 2. | ಶ್ರೀ. ಟಿ. ಭಾಸ್ಕರ್‌ರವರು (ಟಿ.ಟಿ) | ಉಪಾಧ್ಯಕ್ಷರು |
| 3. | ಶ್ರೀ. ಟಿ. ಎಸ್. ಕೃಷ್ಣಮೂರ್ತಿರವರು (ಜರಿಕೃಷ್ಣ) | ನಿರ್ದೇಶಕರು |
| 4. | ಶ್ರೀ. ಆರ್. ಭಾಸ್ಕರ್‌ರವರು (ಗಿಣಿ) | ನಿರ್ದೇಶಕರು |
| 5. | ಶ್ರೀ. ಎಣ್ಣೆಗೆರೆ ಆರ್. ವೆಂಕಟರಾಮಯ್ಯರವರು (ವೈ. ವಿ. ರಾಜು) | ನಿರ್ದೇಶಕರು |
| 6. | ಶ್ರೀ. ಎಸ್. ಉಮಾಶಂಕರ್‌ರವರು | ನಿರ್ದೇಶಕರು |
| 7. | ಶ್ರೀ. ಕುಲಾವಿ ಆರ್. ಮಲ್ಲಣ್ಣರವರು | ನಿರ್ದೇಶಕರು |
| 8. | ಶ್ರೀ. ಊರುಕೆರೆ ಜಿ. ದಯಾನಂದರವರು | ನಿರ್ದೇಶಕರು |
| 9. | ಶ್ರೀ. ಕೃ. ಅಶ್ವತ್ಥನಾರಾಯಣರವರು | ನಿರ್ದೇಶಕರು |
| 10. | ಶ್ರೀ. ಮಾಧವರವರು | ನಿರ್ದೇಶಕರು |
| 11. | ಶ್ರೀಮತಿ. ಹೆಚ್. ಪಾರ್ವತಿರವರು (ರಂಗನಾಯಕಿ) | ಮಹಿಳಾ ನಿರ್ದೇಶಕರು |
| 12. | ಶ್ರೀಮತಿ ಆರ್. ದೇವಕಿರವರು | ಮಹಿಳಾ ನಿರ್ದೇಶಕರು |
| 13. | ಶ್ರೀ. ಪಿ. ದೇವರಾಜುರವರು | ನಿರ್ದೇಶಕರು (ಹಿಂ. ವರ್ಗ) |
| 14. | ಶ್ರೀ. ಪಿ. ಎಂ. ನಾಗರಾಜುರವರು | ನಿರ್ದೇಶಕರು (ಪ.ಜಾ/ಪ.ಪಂ) |
| 15. | ಶ್ರೀ. ಶಾಂತರಾಜುರವರು (ಬ್ಯಾಂಕಿಂಗ್ ಪರಿಣಿತರು) | ನಿರ್ದೇಶಕರು |
| 16. | ಶ್ರೀ. ಜಿ. ಶಿವಕುಮಾರ್‌ರವರು (ಚಾರ್ಟರ್ಡ್ ಅಕೌಂಟೆಂಟ್) | ನಿರ್ದೇಶಕರು |

---

## 2018-19ನೇ ಸಾಲಿನಲ್ಲಿ ನಡೆದ ನಿರ್ದೇಶಕ ಮಂಡಳಿಯ ಒಟ್ಟು ಸಭೆಗಳು – 16

### ಹಾಜರಾತಿ ವಿವರ

| | | | |
|---|---|---|---|
| 1. | ಶ್ರೀ. ಡಿ. ಹೆಚ್. ಜಗನ್ನಾಥ್‌ರವರು | – | 16 |
| 2. | ಶ್ರೀ. ಟಿ. ಭಾಸ್ಕರ್‌ರವರು | – | 12 |
| 3. | ಶ್ರೀ. ಟಿ. ಎಸ್. ಕೃಷ್ಣಮೂರ್ತಿರವರು | – | 16 |
| 4. | ಶ್ರೀ. ಆರ್. ಭಾಸ್ಕರ್‌ರವರು | – | 15 |
| 5. | ಶ್ರೀ. ಎಣ್ಣೆಗೆರೆ ಆರ್. ವೆಂಕಟರಾಮಯ್ಯರವರು | – | 08 |
| 6. | ಶ್ರೀ. ಎಸ್. ಉಮಾಶಂಕರ್‌ರವರು | – | 16 |
| 7. | ಶ್ರೀ. ಕುಲಾವಿ ಆರ್. ಮಲ್ಲಣ್ಣರವರು | – | 16 |
| 8. | ಶ್ರೀ. ಊರುಕೆರೆ ಜಿ. ದಯಾನಂದರವರು | – | 16 |
| 9. | ಶ್ರೀ. ಕೃ. ಅಶ್ವತ್ಥನಾರಾಯಣರವರು | – | 16 |
| 10. | ಶ್ರೀ. ಮಾಧವರವರು | – | 15 |
| 11. | ಶ್ರೀಮತಿ. ಹೆಚ್. ಪಾರ್ವತಿರವರು | – | 14 |
| 12. | ಶ್ರೀಮತಿ ಆರ್. ದೇವಕಿರವರು | – | 15 |
| 13. | ಶ್ರೀ. ಪಿ. ದೇವರಾಜುರವರು | – | 15 |
| 14. | ಶ್ರೀ. ಪಿ. ಎಂ. ನಾಗರಾಜುರವರು (ಪ.ಜಾ/ಪ.ಪಂ) | – | 14 |
| 15. | ಶ್ರೀ. ಶಾಂತರಾಜುರವರು (ಬ್ಯಾಂಕಿಂಗ್ ಪರಿಣಿತರು) | – | 13 |
| 16. | ಶ್ರೀ. ಜಿ. ಶಿವಕುಮಾರ್‌ರವರು (ಚಾರ್ಟರ್ಡ್ ಅಕೌಂಟೆಂಟ್) | – | 11 |

# ಟೆಕ್ಸ್‌ಟೈಲ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

**ಆಡಳಿತ ಕಛೇರಿ: 2ನೇ ಮಹಡಿ, ದೇವಾಂಗ ಮಾರ್ಕೆಟ್, ಜುಮ್ಮಾ ಮಸೀದಿ ರಸ್ತೆ, ಬೆಂಗಳೂರು – 560 002.**

## 2018– 2019ನೇ ಸಾಲಿನ ನಿರ್ದೇಶಕ ಮಂಡಳಿ ವರದಿ

ಮಾನ್ಯ ಸದಸ್ಯರೇ,

ನಮ್ಮ ಬ್ಯಾಂಕಿನ ಐವತ್ತಾರನೆಯ ವಾರ್ಷಿಕ ಸಾಮಾನ್ಯ ಸರ್ವ ಸದಸ್ಯರ ಸಭೆಗೆ ಆಗಮಿಸಿರುವ ತಮ್ಮೆಲ್ಲರನ್ನು ಬ್ಯಾಂಕಿನ ನಿರ್ದೇಶಕ ಮಂಡಳಿಯು ಹಾರ್ದಿಕವಾಗಿ ಸ್ವಾಗತಿಸುತ್ತದೆ.

ವರದಿ ಸಾಲಿನಲ್ಲಿ ಮೃತರಾದ ಈ ಕೆಳಕಂಡ ಬ್ಯಾಂಕಿನ ಸದಸ್ಯರ ಆತ್ಮಕ್ಕೆ ಶಾಂತಿ ಲಭಿಸಲೆಂದು ಹಾಗೂ ಮೃತರ ಅಗಲಿಕೆಯಿಂದಾದ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಭಗವಂತನು ನೀಡಲೆಂದು ಪ್ರಾರ್ಥಿಸುತ್ತೇವೆ.

ಬ್ಯಾಂಕಿನ ಮಾಜಿ ಅಧ್ಯಕ್ಷರಾಗಿದ್ದ ಶ್ರೀಯುತರಾದ ವೈ. ವಿ. ವೆಂಕಟರಂಗಪ್ಪ (ವೈ. ಹೆಚ್. ರಂಗಣ್ಣ)ರವರು ಹಾಗೂ ಸದಸ್ಯರುಗಳಾದ ಆರ್. ನಾಗರಾಜ್, ಆರ್. ಸಂಪತ್ ಕುಮಾರ್, ಜಿ. ನಾರಾಯಣಸ್ವಾಮಿ, ಬಿ. ರಾಜಣ್ಣ, ಎಂ. ನಾಗರಾಜ್, ಬಿ. ಕೃಷ್ಣಪ್ಪ, ಪಿ. ಸುಬ್ಬಯ್ಯ, ಆರ್. ಜಯಲಕ್ಷ್ಮಿ, ಬಿ. ವರದರಾಜು, ಎಂ. ಕೃಷ್ಣಪ್ಪ, ಎಸ್. ಕೃಷ್ಣಮೂರ್ತಿ, ಎಸ್. ಜಿ. ಶಂಕರ್, ಆದಿನಾರಾಯಣಪ್ಪ, ಸಿ. ಗಿರೀಶ್, ಎಂ. ಶ್ರೀನಿವಾಸ್, ಎನ್. ಭಾರತಿ, ಎಸ್. ಭಾಸ್ಕರ್, ಹೆಚ್. ಹನುಮಯ್ಯ, ಜಿ. ಮೋಹನ್, ಆರ್. ನಾಗರತ್ನ, ಕೆ. ರಘುರಾಂ, ಎಂ. ರಾಜು, ಎಂ. ವೆಂಕಟೇಶ್, ಆರ್. ನಟರಾಜ್, ಎಸ್. ಸೀನಪ್ಪ, ಕೆ. ಎನ್. ಶಶಿಕುಮಾರ್, ಹೆಚ್. ಎಂ. ಚಂದ್ರಶೇಖರ್, ವಿ. ಹನುಮದಾಸ್, ಎ. ಲಕ್ಷ್ಮಿನಾರಾಯಣ, ಸುಬ್ಬಲಕ್ಷ್ಮಿ, ಬಿ. ನಾಗರಾಜು, ಎಸ್. ಗಂಗಣ್ಣ, ಬಿ. ಗಂಗಾಧರಪ್ಪ, ಪಾರ್ವತಮ್ಮ, ಟಿ. ಎಸ್. ಅಶ್ವತ್ಥನಾರಾಯಣ, ಚಿಂದಿಜ್ಞಾನದೇವ, ವೈ. ವಿ. ಪದ್ಮಾವತಿ, ಎಲ್. ಜಯಮ್ಮ, ನರಸಮ್ಮ, ಟಿ. ಪರಶುರಾಂ, ಪಿ. ಮಂಜುಳ, ಪಿ. ಬನಶಂಕರ್, ವಿ. ಧನಲಕ್ಷ್ಮಿ, ಕಾಂತಿಲಾಲ್ ಜೈನ್, ವಸಂತಮ್ಮ, ಆರ್. ಪದ್ಮರಾಜು, ಎಂ. ಧನಂಜಯ, ವಿಶ್ವನಾಥಯ್ಯ, ಎ. ವೆಂಕಟೇಶ್, ಸಿ. ಚಂದ್ರಶೇಖರ್, ಆರ್. ಲಕ್ಷ್ಮಮ್ಮ, ರಾಜಲಕ್ಷ್ಮಿ, ಎಸ್. ಗುರುಮೂರ್ತಿ, ಬಿ. ಆರ್. ಆನಂದರಾಮು, ವೈ. ವಿ. ನಾರಾಯಣ, ಪುಟ್ಟರಾಜು, ಸುಮಿತ್ರ, ಕೆ. ಪಾಂಡುರಂಗ, ಆರ್. ಉಮಾಶಂಕರ್, ಸಿ. ದಾಸಪ್ಪ, ರಾಜಮ್ಮ, ಲಕ್ಷ್ಮಣಪ್ಪ, ದೇವರಾಜು, ಎನ್. ಲಕ್ಷ್ಮಿನಾರಾಯಣ, ಸರೋಜಮ್ಮ, ಕೆ. ಧನರಾಜು, ಚಿಕ್ಕ ಹನುಮಂತಪ್ಪ, ಶೋಭ, ಭಾಗ್ಯಲಕ್ಷ್ಮಿ, ವಿ. ಎಸ್. ಕೃಪೇಂದ್ರ, ಅಕ್ಕಯ್ಯಮ್ಮ, ಬಿ. ಸಿದ್ದರಾಜು, ಗೌರಮ್ಮ, ಕಮಲಾಕ್ಷಮ್ಮ, ಎಸ್. ಟಿ. ಪೆರುಮಾಳ್ ಸ್ವಾಮಿ, ಎಸ್. ಜಿ. ಆಶಾ, ಜಿ. ನಾರಾಯಣ, ಸಿ. ಎಲ್. ಮಹಾಲಿಂಗಯ್ಯ, ಪುಟ್ಟತಾಯಮ್ಮ, ರಾಜು, ಬಿ. ಹೆಚ್. ರಾಮಯ್ಯ, ವಿ. ಎಸ್. ಸತ್ಯನಾರಾಯಣ, ಕೃಷ್ಣಮೂರ್ತಿ, ಯೋಗೀಶ್ವರ, ವರಲಕ್ಷ್ಮಿ, ಬಿ. ಎನ್. ಸರಸ್ವತಿ, ಸರೋಜಮ್ಮ, ಬಿ. ಎಂ. ರಮೇಶ್, ಕೆ. ವೆಂಕಟೇಶ, ಆರ್. ಕೃಷ್ಣನ್, ಆರ್. ಬನಶಂಕರ್, ಎಸ್. ಗಿರೀಶ್, ನಾಗರಾಜ್, ಹನುಮಂತಪ್ಪ, ಜಿ. ವಿಶ್ವನಾಥ, ಹೆಚ್. ಆದಿನಾರಾಯಣ, ಆನಂದಕುಮಾರ್. ಆರ್. ವಿ. ವೀರಭದ್ರಯ್ಯ, ಎನ್. ಮುನಿಯಪ್ಪ, ಬನಮ್ಮ, ಜಯಲಕ್ಷ್ಮಮ್ಮ, ಬಿ. ಕೆ. ರಾಮಮೂರ್ತಿ, ಆರ್. ರಂಗನಾಥ, ಹೆಚ್. ಮುನಿಹನುಮ, ಸಿ. ಟಿ. ತಮ್ಮಯ್ಯ ಇವರುಗಳ ನಿಧನಕ್ಕೆ ಗೌರವ ಸೂಚಿಸಲು ಒಂದು ನಿಮಿಷ ಮೌನವನ್ನಾಚರಿಸಿ ಮೃತರುಗಳ ಆತ್ಮಕ್ಕೆ ಶಾಂತಿಯನ್ನು ಕೋರೋಣವೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

ಬ್ಯಾಂಕಿನ ವಾರ್ಷಿಕ ವರದಿ 31ನೇಯ ಮಾರ್ಚ್ 2019ಕ್ಕೆ ಅಂತ್ಯಗೊಂಡ ಆರ್ಥಿಕ ವರ್ಷದ ಪರಿಶೋಧಿಸಿದ ಆಸ್ತಿ ಹೊಣೆ ಪಟ್ಟಿ ಹಾಗೂ ಲಾಭ–ನಷ್ಟದ ತಃಖ್ತೆಯನ್ನು ಲೆಕ್ಕ ಪರಿಶೋಧಕರ ವರದಿಯೊಂದಿಗೆ ಸನ್ಮಾನ್ಯ ಸದಸ್ಯರ ಮುಂದಿಡಲು ಇಚ್ಚಿಸುತ್ತೇವೆ.

**ಬ್ಯಾಂಕಿನ ವ್ಯವಹಾರಿಕ ನಿರ್ವಹಣೆ:**

ನಮ್ಮ ಬ್ಯಾಂಕು 2018–19ನೇ ಸಾಲಿನಲ್ಲಿ ಠೇವಣಿ ಸಂಗ್ರಹಣದಲ್ಲಿ ಶೇ.2.79ರಷ್ಟು ಹೆಚ್ಚಾಗಿದೆ. ಸಾಲ ಮತ್ತು ಮುಂಗಡಗಳಲ್ಲಿ ಶೇ.0.61 ರಷ್ಟು ಹೆಚ್ಚಾಗಿದೆ. ನಮ್ಮ ಬ್ಯಾಂಕಿನ ಪ್ರಸಕ್ತ ಸಾಲಿನ ಠೇವಣಿ ಹಾಗೂ ಸಾಲ ಮತ್ತು ಮುಂಗಡಗಳ ಅನುಪಾತ ಶೇ.45.55 ರಷ್ಟಾಗಿದೆ.

**2018–19ನೇ ಸಾಲಿನ ವಹಿವಾಟಿನ ವಿವರ.**

(ÃÃ ÆPÌWÙÈ)

| ವಿವರ | 31.03.2018 | 31.03.2019 | ಶೇಕಡವಾರು |
|---|---|---|---|
| ಒಟ್ಟು ಠೇವಣಿ | 27321.96 | 28085.22 | +2.79 |
| ಸಾಲ ಮತ್ತು ಮುಂಗಡಗಳು | 12718.65 | 12795.80 | +0.61 |
| ಲಾಭ | 275.61 | 341.55 | +23.93 |
| ನಿವ್ವಳ ಲಾಭ | 184.19 | 248.92 | +35.14 |
| ದುಡಿಯುವ ಬಂಡವಾಳ | 31957.90 | 32693.41 | +2.30 |
| ಸಿಆರ್‌ಎಆರ್ | 22.50 | 21.92 | –2.58 |
| ಒಟ್ಟು ಆಸ್ತಿಯ ಮೇಲಿನ ಗಳಿಕೆ | 9.95 | 9.63 | –3.22 |
| ಕಾಸ್ಟ್ ಆಫ್ ಫಂಡ್ | 7.35 | 6.96 | –5.31 |
| ಒಟ್ಟು ಸಿಬ್ಬಂದಿ | 94 | 92 | –2 |

**ಪ್ರಸಕ್ತ ವರ್ಷದ ಲಾಭ:**

ನಮ್ಮ ಬ್ಯಾಂಕು 2018–19ರಲ್ಲಿ ರೂ.248.92 ಲಕ್ಷ ನಿವ್ವಳ ಲಾಭವನ್ನು ದಾಖಲಿಸಿದೆ.

**ಲಾಭಾಂಶ :**

ಕಳೆದ 2017–18ನೇ ಸಾಲಿನಲ್ಲಿ ಶೇ.11 ರಷ್ಟು ಲಾಭಾಂಶವನ್ನು ನೀಡಲಾಗಿತ್ತು. ನಂತರ 2018–19ನೇ ಸಾಲಿಗೆ ಸಂಬಂಧಿಸಿದಂತೆ ಲೆಕ್ಕ ಪತ್ರಗಳ ವಿವರಣೆಯನ್ನು ಸಾಮಾನ್ಯ ಸಭೆಗೆ ಈಗ ಮಂಡಿಸಿ ಒಪ್ಪಿಗೆಯನ್ನು ಪಡೆಯುತ್ತಿದ್ದೇವೆ.

2018–19ನೇ ಸಾಲಿನ ಒಟ್ಟಾರೆ ವಹಿವಾಟಿನ ವಿವರವನ್ನು ಮೇಲೆ ತಿಳಿಸಿರುವಂತೆ ನಿರ್ದೇಶಕ ಮಂಡಳಿಯಲ್ಲಿ ಸವಿಸ್ತಾರವಾದ ಚರ್ಚೆಯ ನಂತರ ಭಾರತೀಯ ರಿಸರ್ವ್ ಬ್ಯಾಂಕಿನ ಬಿಗಿಯಾದ ಹಣಕಾಸಿನ ನೀತಿಯಿಂದಾಗಿ ಬ್ಯಾಂಕು ಸ್ಥಾಪಿಸಿರುವ 4 ಹೊಸ ಶಾಖೆಗಳ ಸಂಬಂಧ ಉಂಟಾಗಿರುವ ಹೆಚ್ಚಿನ ಖರ್ಚು, ಹಿಂದಿನ ಸಾಲಿನಲ್ಲಿ ಗಣನೀಯ ಪ್ರಮಾಣದ ಸಾಲ ಮುಂಗಡಗಳನ್ನು ಗಮನದಲ್ಲಿರಿಸಿಕೊಂಡು ನಿರ್ದೇಶಕ ಮಂಡಳಿಯು 2018–19ನೇ ಸಾಲಿಗೆ ಶೇ.9 ರಂತೆ ಲಾಭಾಂಶ ನೀಡಲು ಶಿಫಾರಸ್ಸು ಮಾಡಿರುತ್ತದೆ.

ಸಹೃದಯ ಸದಸ್ಯರು ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಂಡು ಈ ಪ್ರಸ್ತಾವನೆಗೆ ಅನುಮೋದನೆ ನೀಡಬೇಕೆಂದು ಕಳಕಳಿಯಿಂದ ಪ್ರಾರ್ಥಿಸುತ್ತೇವೆ.

**ಸದಸ್ಯತ್ವ ಮತ್ತು ಷೇರು ಬಂಡವಾಳದ ಪ್ರಗತಿಯ ನೋಟ :**

2018–19ನೇ ಸಾಲಿನಲ್ಲಿ 7.26 ಕೋಟಿಯಷ್ಟು ಬಂಡವಾಳವಿದ್ದದ್ದು. ನಮ್ಮ ಅಧಿಕೃತ ಬಂಡವಾಳ ಬೈಲಾ ಪ್ರಕಾರ ರೂ.20.00 ಕೋಟಿಯಷ್ಟಿದ್ದು, ಬ್ಯಾಂಕಿನ ಪ್ರಗತಿ ಮತ್ತು ವ್ಯವಹಾರದ ಬೆಳವಣಿಗೆ ಗಮನಕ್ಕೆ ತೆಗೆದುಕೊಂಡು ಅಧಿಕೃತ ಬಂಡವಾಳವನ್ನು ರೂ.20.00 ಕೋಟಿಗೆ 2012–13ರ ಸಾಮಾನ್ಯ ಸರ್ವಸದಸ್ಯರ ಸಭೆಯಲ್ಲಿ ನಿಗಧಿ ಪಡಿಸಲಾಯಿತು. ಪ್ರಸಕ್ತ ಸಾಲಿಗೂ ಈ ನಿರ್ಣಯವನ್ನು ಜಾರಿಯಿಡಲು ತೀರ್ಮಾನಿಸಲಾಗಿ ತಮ್ಮ ಅನುಮತಿಗಾಗಿ ಮಂಡಿಸುತ್ತಿದ್ದೇವೆ.

**ಸದಸ್ಯತ್ವ :**

| ವಿವರ | | ವರ್ಷದ ಪ್ರಾರಂಭದಲ್ಲಿದ್ದ ಸದಸ್ಯರು | ವರದಿ ಸಾಲಿನಲ್ಲಿ ಸೇರ್ಪಡೆಯಾದ ಸದಸ್ಯರು | ವರದಿ ಸಾಲಿನಲ್ಲಿ ಸದಸ್ಯತ್ವ ಹಿಂದಕ್ಕೆ ಪಡೆದವರು | ವರದಿ ಸಾಲಿನ ಆಖೈರಿಗೆ ಇರತಕ್ಕ ಸದಸ್ಯರು | ಒಟ್ಟು |
|---|---|---|---|---|---|---|
| **2015–2016** | ಖಾಯಂ ಸದಸ್ಯರು | 15032 | 543 | 89 | 15486 | 17768 |
| | ಸಹ ಸದಸ್ಯರು | 2133 | 271 | 122 | 2282 | |
| **2016–2017** | ಖಾಯಂ ಸದಸ್ಯರು | 15486 | 949 | 80 | 16355 | 18712 |
| | ಸಹ ಸದಸ್ಯರು | 2282 | 181 | 106 | 2357 | |
| **2017–2018** | ಖಾಯಂ ಸದಸ್ಯರು | 16355 | 77 | 5 | 16427 | 18794 |
| | ಸಹ ಸದಸ್ಯರು | 2357 | 25 | 15 | 2367 | |
| **2018–2019** | ಖಾಯಂ ಸದಸ್ಯರು | 16427 | 591 | 136 | 16882 | 19348 |
| | ಸಹ ಸದಸ್ಯರು | 2367 | 225 | 126 | 2466 | |

**ಪಾವತಿಯಾದ ಷೇರು ಬಂಡವಾಳ :** (ÃÃ ÆPWÙÈ)

| ವಿವರ | | ಸಾಲು ಪ್ರಾರಂಭಕ್ಕೆ | ಸಾಲಿನಲ್ಲಿ ಸೇರ್ಪಡೆ | ಸಾಲಿನಲ್ಲಿ ವಾಪಸಾತಿ | ಸಾಲಾ ಖೈರಿಗೆ ಉಳಿಕೆ | ಒಟ್ಟು ಷೇರು ಬಂಡವಾಳ |
|---|---|---|---|---|---|---|
| **2015-2016** | ಖಾಯಂ ಸದಸ್ಯರು | 445.69 | 38.34 | 16.56 | 467.47 | 805.03 |
| | ಸಹ ಸದಸ್ಯರು | 329.26 | 46.99 | 38.69 | 337.56 | |
| **2016-2017** | ಖಾಯಂ ಸದಸ್ಯರು | 467.47 | 36.60 | 19.72 | 484.35 | 810.81 |
| | ಸಹ ಸದಸ್ಯರು | 337.56 | 19.76 | 30.86 | 326.46 | |
| **2017-2018** | ಖಾಯಂ ಸದಸ್ಯರು | 484.35 | 9.96 | 12.76 | 481.55 | 793.05 |
| | ಸಹ ಸದಸ್ಯರು | 326.46 | 3.31 | 18.27 | 311.50 | |
| **2018-2019** | ಖಾಯಂ ಸದಸ್ಯರು | 481.55 | 22.53 | 36.15 | 467.93 | 726.31 |
| | ಸಹ ಸದಸ್ಯರು | 311.50 | 9.80 | 62.92 | 258.38 | |

**ಆಪದ್ಧನ ನಿಧಿ ಮತ್ತು ಇತರೇ ನಿಧಿಗಳು :**

ನಮ್ಮ ಬ್ಯಾಂಕಿನ ಆಪದ್ಧನ ನಿಧಿ ಮತ್ತು ಇತರೇ ನಿಧಿಗಳು ವರದಿ ಸಾಲಿನ ಆರಂಭದಲ್ಲಿ ರೂ.28.97 ಕೋಟಿಗಳಿದ್ದು, ಸಾಲಾಂತ್ಯಕ್ಕೆ ರೂ.30.20 ಕೋಟಿಗಳಿಗೆ ಏರಿದ್ದು ಈ ವೃದ್ಧಿಯು ಶೇ. 4.25% ರಷ್ಟಾಗಿರುತ್ತದೆ.

ಕಳೆದ ಮೂರು ಸಾಲಿನ ಠೇವಣಿಗಳ ಮತ್ತು ದುಡಿಯುವ ಬಂಡವಾಳದ ತುಲನಾತ್ಮಕ ಅಂಕಿ ಅಂಶಗಳು ಕೆಳಕಂಡಂತಿವೆ:

**(ರೂ. ಕೋಟಿಗಳಲ್ಲಿ)**

| **ವಿವರ** | **31.03.2017** | **31.03.2018** | **31.03.2019** |
|---|---|---|---|
| ಠೇವಣಾತಿಗಳು | 296.80 | 273.22 | 280.85 |
| ದುಡಿಯುವ ಬಂಡವಾಳ | 341.13 | 319.58 | 326.93 |

ಎಲ್ಲಾ ರೀತಿಯ ಠೇವಣಿಗಳು ವಿಮೆ ಸೌಲಭ್ಯಕ್ಕೊಳಪಟ್ಟಿರುತ್ತವೆ. ಠೇವಣಿಗಳಿಗೆ ರೂ.1.00 ಲಕ್ಷದವರೆಗೆ ಭಾರತೀಯ ರಿಸರ್ವ್ ಬ್ಯಾಂಕಿನ ಸೂಚಿತ ವಿಮಾ ಕಂಪನಿ ಡಿಐಸಿಜಿಸಿಯ ಮೂಲಕ ವಿಮೆ ಭದ್ರತೆ ಮಾಡಲಾಗಿರುತ್ತದೆ. ಸದರಿ ವಿಮೆ ಕಂತನ್ನು ಬ್ಯಾಂಕು ತನ್ನ ಸ್ವಂತ ಖರ್ಚಿನಲ್ಲಿಯೇ ಭರಿಸುತ್ತಿದೆ.

**ಠೇವಣಿಗಳು ಮತ್ತು ದುಡಿಯುವ ಬಂಡವಾಳ :**

ಬ್ಯಾಂಕು ಗ್ರಾಹಕರ ಠೇವಣಿಗಳಿಗೆ ನೀಡುವ ಬಡ್ಡಿ ದರವು ಆಕರ್ಷಕವಾಗಿದ್ದು ಎಲ್ಲಾ ವರ್ಗದ ಗ್ರಾಹಕರುಗಳಿಗೆ ಅನುಕೂಲ ಮಾಡಲಾಗಿದೆ. ಹಿರಿಯ ನಾಗರೀಕರಿಗೆ ಸಾಮಾನ್ಯ ಬಡ್ಡಿದರದ ಮೇಲೆ ಶೇ.0.50 ರಷ್ಟು ಹೆಚ್ಚಿನ ಬಡ್ಡಿ ನೀಡಲಾಗುತ್ತಿದೆ. ನೊಂದಾಯಿತ ಸಂಘ ಸಂಸ್ಥೆಗಳಿಗೆ ಸಾಮಾನ್ಯ ಬಡ್ಡಿದರದ ಮೇಲೆ ಶೇ.0.50 ರಷ್ಟು ಹೆಚ್ಚಿನ ಬಡ್ಡಿಯನ್ನು 06 ತಿಂಗಳ ಮೇಲ್ಪಟ್ಟ ಅವಧಿಯ ಠೇವಣಿಗಳಿಗೆ ನೀಡಲಾಗುತ್ತಿದೆ.

ಆದಾಯ ತೆರಿಗೆ ಇಲಾಖೆಯ ಆದೇಶದ ಪ್ರಕಾರ ಗ್ರಾಹಕರಿಗೆ ನೀಡುವ ಠೇವಣಿಗಳ ಬಡ್ಡಿಯ ಮೂಲದಲ್ಲಿಯೇ TDS ಕಠಾವು ಮಾಡಲಾಗುತ್ತಿದೆ.

**ಸಾಲ ಮತ್ತು ಮುಂಗಡಗಳು :**

ಬ್ಯಾಂಕು ವಿವಿಧ ಉದ್ದೇಶಗಳಿಗೆ ಸದಸ್ಯರುಗಳಿಗೆ ಸಾಲ ನೀಡಲಾಗುತ್ತಿದೆ. ಈ ಸಾಲಗಳಿಗೆ ಸಾಕಷ್ಟು ಭದ್ರತೆಯನ್ನು ಸದಸ್ಯರುಗಳಿಂದ ಪಡೆಯಲಾಗುತ್ತಿದೆ.

ಮಗ್ಗಗಳನ್ನು / ಹುರಿಮಿಷನ್ ಯಂತ್ರಗಳನ್ನು ಬ್ಯಾಂಕಿಗೆ ಈಡು ಮಾಡಿಕೊಂಡು ಸದಸ್ಯರುಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಸುಲಭ ಕಂತುಗಳಲ್ಲಿ ಪಾವತಿ ಮಾಡುವಂತೆ ಸಾಲ ನೀಡಲಾಗುತ್ತಿದೆ. ಈ ಸಾಲಗಳಿಗೆ ಯಂತ್ರಗಳನ್ನಲ್ಲದೆ ಇತರೇ ಭದ್ರತೆಯನ್ನು ಪಡೆದುಕೊಳ್ಳಲಾಗುತ್ತಿದೆ.

ಸದಸ್ಯರ ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕಾಗಿ ಶೇ. 8.50ರ ಬಡ್ಡಿ ದರದಲ್ಲಿ ಸಾಲ ನೀಡುವ ಯೋಜನೆ ಬ್ಯಾಂಕಿನಲ್ಲಿ ಲಭ್ಯವಿದ್ದು ಗರಿಷ್ಟ ಮೊತ್ತ ರೂ.5 ಲಕ್ಷದವರೆಗೂ ಸಾಲ ಪಡೆಯಬಹುದು.

**ನೇಕಾರಿಕೆಯ ಸಾಲ :**

ಶೇ.3ರ ಬಡ್ಡಿದರದಲ್ಲಿ ಬ್ಯಾಂಕಿನಿಂದ ನೀಡಲಾದ ಸಾಲಗಳಿಗೆ ವರದಿ ಸಾಲಿಗೆ ಸರ್ಕಾರದಿಂದ ರೂ.39.24 ಲಕ್ಷ ಬಡ್ಡಿ ಸಹಾಯ ಧನವು ಬ್ಯಾಂಕಿಗೆ ಬರಬೇಕಾಗಿದ್ದು, ಆ ಪೈಕಿ ರೂ.23.52 ಲಕ್ಷ ಪ್ರಸಕ್ತ ಸಾಲಿನಲ್ಲಿ ಬಂದಿದ್ದು, ಬಾಕಿ ರೂ.15.72 ಲಕ್ಷಗಳು ಬರಬೇಕಾಗಿರುತ್ತದೆ. ಸರ್ಕಾರದ ಆದೇಶದಂತೆ ಶೇ.1 ಹಾಗೂ ಶೇ.3ರ ಬಡ್ಡಿದರದ ನೇಕಾರಿಕೆ ಸಾಲ ನೀಡಲಾಗುತ್ತಿದೆ.

**ಕರ್ನಾಟಕ ಸರ್ಕಾರ ಜವಳಿ ಇಲಾಖೆಯವರು ನೇಕಾರಿಕೆಗೆ ನೀಡುವ ಸಹಾಯಧನ (Subsidy) :**

ನೇಕಾರರ ವಿವಿಧ ಸಂಘಗಳ ಪ್ರಯತ್ನದ ಫಲವಾಗಿ ಕರ್ನಾಟಕ ಸರ್ಕಾರವು ಸಣ್ಣ ಮತ್ತು ಗುಡಿ ನೇಕಾರಿಕೋದ್ಯಮದ ಪ್ರಗತಿಗಾಗಿ ರಾಮನಗರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರುವ ನೇಕಾರರಿಗೆ ಎರಡು ಮಗ್ಗಗಳ ಘಟಕ ಸ್ಥಾಪಿಸಲು ಪ್ರೋತ್ಸಾಹ ನೀಡುವ ದಿಸೆಯಲ್ಲಿ ಸರ್ಕಾರವು ಒಂದು ಮಗ್ಗಕ್ಕೆ ಬೇಕಾಗುವ ವೆಚ್ಚವನ್ನು ಉಚಿತವಾಗಿ ಭರಿಸಿ ಮತ್ತೊಂದು ಮಗ್ಗಕ್ಕೆ ಸಹಕಾರಿ ಬ್ಯಾಂಕುಗಳ ಮೂಲಕ ಸಾಲದ ರೂಪವಾಗಿ ನೀಡುವ ಯೋಜನೆ, ಅದೇ ರೀತಿ ಗಣಕೀಕೃತ ಜಾಕಾರ್ಡ್ ಖರೀದಿಸಲು ಶೇ.50ರಷ್ಟು ಮೊತ್ತ ಸಹಾಯಧನ ನೀಡಿ ಉಳಿದ ಶೇ.50ರಷ್ಟು ಮೊತ್ತವನ್ನು ಸಹಕಾರ ಬ್ಯಾಂಕುಗಳ ಮೂಲಕ ಸಾಲದ ರೂಪವಾಗಿ ನೀಡುವ ಯೋಜನೆಗಳಡಿಯಲ್ಲಿ ನಮ್ಮ ಬ್ಯಾಂಕು ಜುಲೈ 2019ರ ಅವಧಿಗೆ 05 ನೇಕಾರ ಫಲಾನುಭವಿ ಸದಸ್ಯರಿಗೆ ಮಗ್ಗಗಳನ್ನು ಸ್ಥಾಪಿಸಲು ಒಟ್ಟು ರೂ.07.50 ಲಕ್ಷ ಹಾಗೂ 19 ನೇಕಾರ ಫಲಾನುಭವಿ ಸದಸ್ಯರಿಗೆ ಕಂಪ್ಯೂಟರ್ ಜಕಾರ್ಡ್‌ಗಳನ್ನು ಸ್ಥಾಪಿಸಲು ಒಟ್ಟು ರೂ.54.00 ಲಕ್ಷದಷ್ಟು ಸಾಲವನ್ನು ಮಂಜೂರು ಮಾಡಲಾಗಿದೆ. ಇದಕ್ಕಾಗಿ ಈ ಯೋಜನೆಯಡಿ ಸ್ಥಾಪಿಸುವ ಯಂತ್ರಗಳನ್ನಲ್ಲದೆ ಇತರೇ ಭದ್ರತೆಯನ್ನು ಸಹ ಪಡೆಯಲಾಗಿದೆ.

**ಇ. ಎಂ. ಐ. ಬಡ್ಡಿದರದ ಸಾಲ ಯೋಜನೆ :**

| | | |
|---|---|---|
| ರೂ. 50,00,000/– ಗಳವರೆಗೆ | ಶೇ.11.50 | 60/120/180 ತಿಂಗಳು |
| ರೂ. 50.00 ಲಕ್ಷ ಮೇಲ್ಪಟ್ಟು – 1 ಕೋಟಿವರೆಗೆ | ಶೇ.11.25 | 60/120/180 ತಿಂಗಳು |
| ರೂ. 1.00 ಕೋಟಿಗಳಿಗೆ ಮೇಲ್ಪಟ್ಟು | ಶೇ.11.00 | 60/120/180 ತಿಂಗಳು |
| ಗೃಹಸಾಲ | ಶೇ.10.50 | 180 ತಿಂಗಳು |
| ವಾಹನ ಸಾಲ – ದ್ವಿಚಕ್ರ | ಶೇ.11.70 | 36 ತಿಂಗಳು |
| ವಾಹನ ಸಾಲ – ನಾಲ್ಕು ಚಕ್ರ | ಶೇ.11.50 | 60 ತಿಂಗಳು |

**ಎನ್.ಇ.ಎಫ್.ಟಿ. / ಆರ್.ಟಿ.ಜಿ.ಎಸ್. ಸೌಲಭ್ಯ :**

ಎನ್.ಇ.ಎಫ್.ಟಿ. / ಆರ್.ಟಿ.ಜಿ.ಎಸ್. ಮೂಲಕ ತಾವು ಇಚ್ಛಿಸುವಂತಹ ಇತರೇ ಬ್ಯಾಂಕುಗಳ ಖಾತೆದಾರರಿಗೆ ತಮ್ಮ ಹಣವನ್ನು ಕೂಡಲೇ ವರ್ಗಾಯಿಸುವ ಸೌಲಭ್ಯ ಹಾಗೂ ಇತರೇ ಬ್ಯಾಂಕುಗಳಿಂದ ಖಾತೆದಾರರು ತಮ್ಮ ಖಾತೆಗಳಿಗೆ ಹಣವನ್ನು ಜಮಾ ಪಡೆಯುವ ಸೌಲಭ್ಯವನ್ನು ಸಹ ಇತರೇ ಬ್ಯಾಂಕುಗಳ ಸಹಕಾರದಿಂದ ಒದಗಿಸುತ್ತಿದ್ದೇವೆ. ಈ ಸೌಲಭ್ಯಗಳನ್ನು ನಮ್ಮ ಬ್ಯಾಂಕಿನಿಂದಲೇ ಒದಗಿಸಲು ಐ.ಎಫ್.ಎಸ್.ಸಿ. ಕೋಡ್ ಸಂಖ್ಯೆಯನ್ನು ಪ್ರತ್ಯೇಕವಾಗಿ ಪಡೆದುಕೊಳ್ಳಲಾಗಿರುತ್ತದೆ.

**ಅನುತ್ಪಾದಕ ಸಾಲಗಳು :**

ನಿರ್ದೇಶಕ ಮಂಡಳಿಯು ಅನುತ್ಪಾದಕ ಸಾಲದ ವಸೂಲಾತಿಗಾಗಿ ಕ್ರಮವಿಟ್ಟಿದ್ದು ಹಾಗೂ ಅದರ ಪ್ರಮಾಣವನ್ನು ಕಡಿಮೆಗೊಳಿಸಲು ವಸೂಲಾತಿಯ ಕ್ರಮವನ್ನು ಬಲಪಡಿಸಲು ಸೂಕ್ತ ಕ್ರಮ ಕೈಗೊಂಡಿದೆ. ಬ್ಯಾಂಕಿನ ಅನುತ್ಪಾದಕ ಸಾಲದ ಪರಿಮಾಣ ಇಂತಿದೆ.

(ÃÃ ÆPWÙÈ)

| ವಿವರ | 2017 | 2018 | 2019 |
|---|---|---|---|
| ಅನುತ್ಪಾದಕ ಆಸ್ತಿಯ ಮೊತ್ತ | 960.08 | 950.35 | 588.78 |
| ನಿವ್ವಳ ಅನುತ್ಪಾದಕ ಆಸ್ತಿಯ ಮೊತ್ತ | 107.80 | 70.71 | –341.50 |
| ಶೇಕಡವಾರು ನಿವ್ವಳ ಅನುತ್ಪಾದಕ ಆಸ್ತಿ | 0.77 | 0.60 | –2.88 |

**ಬ್ಯಾಂಕಿನ ಸಿಬ್ಬಂದಿಗಳ ಕ್ಷೇಮಾಭಿವೃದ್ಧಿ ಕಾರ್ಯಕ್ರಮ :**

ಬ್ಯಾಂಕಿನ ಸಿಬ್ಬಂದಿಗಳನ್ನು ಆರೋಗ್ಯ ವಿಮೆ ಯೋಜನೆಯಲ್ಲಿ ಮೆಡಿಕ್ಲೇಮು ಪಾಲಿಸಿಗೊಳಪಡಿಸಿದ್ದು ವರದಿ ಸಾಲಿನಲ್ಲೂ ಸಿಬ್ಬಂದಿಗಳಿಗೆ ಕ್ಷೇಮದ ಸೌಲಭ್ಯ ಒದಗಿಸಿದೆ.

**ಸದಸ್ಯರ ಮರಣ ಪರಿಹಾರ ನಿಧಿ :**

ಬ್ಯಾಂಕಿನ ಸದಸ್ಯರುಗಳು ಮರಣ ಹೊಂದಿದಾಗ ನೀಡುವ ಮರಣ ಪರಿಹಾರ ನಿಧಿ ಮೊತ್ತ ರೂ.8,000/– ಗಳನ್ನು ನೀಡಲಾಗುತ್ತಿರುತ್ತದೆ.

**ಕರ್ನಾಟಕ ರಾಜ್ಯೋತ್ಸವ ಮತ್ತು ಪ್ರತಿಭಾ ಪುರಸ್ಕಾರ :**

ಪ್ರತಿಭಾ ಪುರಸ್ಕಾರ ಹಾಗೂ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ದಿನಾಂಕ:21.11.2018 ರಂದು ಪತಿಯಪ್ಪ ಭವನದಲ್ಲಿ ಏರ್ಪಡಿಸಿ ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿರುತ್ತದೆ. ಸದರಿ ಕಾರ್ಯಕ್ರಮವನ್ನು ಪ್ರಸಕ್ತ ಸಾಲಿನಲ್ಲೂ ಸಹ ಏರ್ಪಡಿಸಲಾಗುತ್ತಿದೆ.

**ಟೆಕ್ಸ್‌ಟೈಲ್ ಸಹಕಾರಿ ವಿದ್ಯಾರ್ಥಿ ಮಿತ್ರ (ಬುಕ್ ಬ್ಯಾಂಕ್):**

ಬ್ಯಾಂಕಿನಿಂದ ಸದಸ್ಯರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಬೇಕಾಗಿರುವ ಪಠ್ಯ ಪುಸ್ತಕಗಳನ್ನು ಉಚಿತವಾಗಿ ನೀಡಲಾಗುತ್ತಿದೆ. ವರದಿ ಸಾಲಿನಲ್ಲಿ 623 ಸದಸ್ಯರ ಮಕ್ಕಳು ನಮ್ಮ ಬುಕ್ ಬ್ಯಾಂಕಿನಿಂದ ಪಠ್ಯ ಪುಸ್ತಕಗಳನ್ನು ಪಡೆದಿರುತ್ತಾರೆ. ಈ ರೀತಿ ಪಡೆದಂತಹ ಪಠ್ಯ ಪುಸ್ತಕಗಳನ್ನು ಪರೀಕ್ಷೆ ಮುಗಿದ ನಂತರ ಕೂಡಲೇ ಬ್ಯಾಂಕಿಗೆ ವಾಪಸ್ಸು ಮಾಡುವ ಎರವಲು ಸೇವೆ ಜಾರಿಯಲ್ಲಿರುತ್ತದೆ. ವಿದ್ಯಾರ್ಥಿಗಳ ಅಜ್ಜ ಅಥವಾ ಅಜ್ಜಿಯರು ಸದಸ್ಯರಾಗಿದ್ದಲ್ಲಿ ಅವರ ಮೊಮ್ಮಕ್ಕಳಿಗೂ ಸಹ ಬುಕ್ ಬ್ಯಾಂಕ್ ಸೌಲಭ್ಯವನ್ನು ನೀಡಲಾಗುತ್ತಿದೆ.

**ಕೋರ್ ಬ್ಯಾಂಕ್ ವ್ಯವಸ್ಥೆ :**

ಕೋರ್ ಬ್ಯಾಂಕು ಅಳವಡಿಕೆಯು ಸಂಪೂರ್ಣಗೊಂಡಿದ್ದು ಬ್ಯಾಂಕಿನ ಎಲ್ಲಾ ಶಾಖೆಗಳು ಕೋರ್ ತಂತ್ರಾಂಶದಲ್ಲಿ ಕಾರ್ಯನಿರ್ವಹಿಸುತ್ತಿರುತ್ತದೆ. ABB (Any Branch Banking) ಬ್ಯಾಂಕಿಂಗ್ ಸೌಲಭ್ಯದ ಅಡಿಯಲ್ಲಿ ಎಲ್ಲಾ ಶಾಖೆಗಳು ಒಳಪಟ್ಟಿದ್ದು, ಸದರಿ ಸೌಲಭ್ಯದಲ್ಲಿ ನಮ್ಮ ಗ್ರಾಹಕರು ಯಾವುದೇ ಶಾಖೆಯಲ್ಲಾದರೂ ನಿಗಧಿಪಡಿಸಿರುವ ಮಿತಿಗೊಳಪಟ್ಟು ನಗದಿನ ವ್ಯವಹಾರದ ಶೀಘ್ರ ಸೇವೆ ಪಡೆಯಲು ಈ ಕೆಳಕಂಡ ನಿಯಮಗಳನ್ನು ಪಾಲಿಸಲು ಮಾನ್ಯ ಸದಸ್ಯರಲ್ಲಿ ಕೋರುತ್ತೇವೆ.

1. ಉಳಿತಾಯ, ಚಾಲ್ತಿ ಖಾತೆ ಹಾಗೂ ಓ.ಡಿ. ಖಾತೆಗಳ ನಗದು ಜಮಾ, ಖರ್ಚು ವ್ಯವಹಾರಗಳಿಗೆ ಮಾತ್ರ ಅನ್ವಯಿಸುತ್ತದೆ.
2. ಚೆಕ್ಕುಗಳ ವರ್ಗಾವಣೆಯು ನಮ್ಮ ಬ್ಯಾಂಕಿನ ಶಾಖೆಗಳ ಚೆಕ್ಕುಗಳಿಗೆ ಮಾತ್ರ ಅನ್ವಯಿಸುತ್ತದೆ.
3. ನಗದು ವ್ಯವಹಾರದ ಗರಿಷ್ಟ ಮಿತಿ ರೂ.30,000/- ಮಾತ್ರ.
4. ಖಾತೆದಾರರಿಗೆ ಮಾತ್ರ ನಗದು ಪಡೆಯಲು ಅವಕಾಶವಿರುತ್ತದೆ.

ಗ್ರಾಹಕರಿಗೆ ತ್ವರಿತ ನಗದು ಪಾವತಿಗಾಗಿ ನೇರ ನಗದು ಪಾವತಿ “Teller Counter” ವ್ಯವಸ್ಥೆ ಕಲ್ಪಿಸಲಾಗಿರುತ್ತದೆ ಹಾಗೂ ಈಗಾಗಲೇ ನೊಂದಾಯಿತ ಗ್ರಾಹಕರುಗಳಿಗೆ ಎಸ್.ಎಂ.ಎಸ್. ಸೇವೆ ಒದಗಿಸಲಾಗುತ್ತಿದ್ದು ಈವರೆಗೆ ಎಸ್.ಎಂ.ಎಸ್. ಸೇವೆ ಪಡೆಯಲು ಹೆಸರು ನೊಂದಾಯಿಸದ ಗ್ರಾಹಕರು ಅವರ ಹೆಸರನ್ನು ನೊಂದಾಯಿಸಿಕೊಂಡು ಎಸ್.ಎಂ.ಎಸ್ ಸೌಲಭ್ಯವನ್ನು ಪಡೆಯುವುದು.

**ಹೊಸ ಶಾಖೆಯ ಆರಂಭ :**

ಈಗಾಗಲೇ ನೆಲಮಂಗಲ, ಉತ್ತರಹಳ್ಳಿ, ಯಲಹಂಕ ಹಾಗೂ ಚಾಮರಾಜಪೇಟೆಗಳಲ್ಲಿ ಶಾಖೆ ಪ್ರಾರಂಭಿಸಿರುವುದಾಗಿ ತಿಳಿಸಲು ಹರ್ಷಿಸುತ್ತಾ, ಸದರಿ ಭಾಗದ ಸದಸ್ಯರುಗಳು ಹೆಚ್ಚಿನ ಆಸಕ್ತಿ ವಹಿಸಿ ಬ್ಯಾಂಕಿನ ನೂತನ ಶಾಖೆಗಳ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳಲು ಕೋರುತ್ತೇವೆ.

**ಮಾನವ ಸಂಪನ್ಮೂಲ :**

ಪ್ರಸಕ್ತ ಬ್ಯಾಂಕೋದ್ಯಮದ ವಾತಾವರಣವು ತೀವ್ರ ಪೈಪೋಟಿಯನ್ನು ಎದುರಿಸುತ್ತಿದೆ. ಬ್ಯಾಂಕು ಗ್ರಾಹಕ ಸ್ನೇಹಿಯಾಗಿ ಅವರಿಗೆ ತೃಪ್ತಿಯಾಗುವ ಸೇವೆಗಳನ್ನು ಒದಗಿಸಲು ಮಾನವ ಸಂಪನ್ಮೂಲದ ಸಮಗ್ರ ಅಭಿವೃದ್ಧಿಯತ್ತ ಒತ್ತು ಕೊಟ್ಟು, ಅಗತ್ಯವಿರುವ ವಿವಿಧ ತರಬೇತಿಗಳನ್ನು ಸಕಾಲದಲ್ಲಿ ಅವರಿಗೆ ಒದಗಿಸಿ ಅವರು ಗ್ರಾಹಕರಿಗೆ ಉತ್ತಮ ಸೇವೆಯನ್ನು ನೀಡಲು ಹಾಗೂ ಅವರ ದಕ್ಷತೆ, ಕಾರ್ಯಕುಶಲತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಹಾಗೂ ಹೆಚ್ಚಿನ ಹೊಣೆಗಾರಿಕೆಯನ್ನು ಹೊರಲು ಸ್ಫೂರ್ತಿಗೊಳ್ಳಲು ನಿರ್ದೇಶಕರ ಮಂಡಳಿಯು ಶ್ರಮಿಸುತ್ತಿದೆ.

ಬ್ಯಾಂಕಿನ ಅನುಮೋದಿತ ವೃಂದ ಬಲ ಹಾಗೂ ಪ್ರಸಕ್ತವಿರುವ ಸಂಖ್ಯಾ ಬಲವು ಈ ಕೆಳಕಂಡಂತಿದೆ.

| ಕ್ರ. ಸಂ. | ಹುದ್ದೆಯ ಹೆಸರು | ಮಂಜೂರಾತಿ ರೀತ್ಯಾ | ನೇಮಕಗೊಂಡಿರುವ ಸಿಬ್ಬಂದಿ |
|---|---|---|---|
| 1 | ಮುಖ್ಯ ಕಾರ್ಯನಿರ್ವಾಹಕರು | 01 | 01 |
| 2 | ಅನುಪಾಲನಾಧಿಕಾರಿ | 01 | – |
| 3 | ಶಾಖಾ ವ್ಯವಸ್ಥಾಪಕರು | 08 | 07 |
| 4 | ಲೆಕ್ಕಿಗರು | 09 | 05 |
| 5 | ಹಿರಿಯ ಸಹಾಯಕರು | 22 | 21 |
| 6 | ಕಿರಿಯ ಸಹಾಯಕರು | 37 | 36 |
| 7 | ಕಛೇರಿ ಸಹಾಯಕರು | 20 | 20 |
| 8 | ವಾಹನ ಚಾಲಕರು | 03 | 02 |
| 9 | ಶೀಘ್ರಲಿಪಿಗಾರರು | 01 | – |
| | **ಒಟ್ಟು** | **102** | **92** |

**ಕೃತಜ್ಞತೆಗಳು :**

ಬ್ಯಾಂಕಿನ ಯಶಸ್ಸಿಗೆ ಠೇವಣಿ ಸಂಗ್ರಹ ಹಾಗೂ ಸಾಲ ವಿತರಣೆ ಮೂಲಾಧಾರ. ನಮ್ಮ ಕೋರಿಕೆಗೆ ಮನ್ನಣೆಯಿತ್ತು ಬ್ಯಾಂಕಿನಲ್ಲಿ ಠೇವಣಿಯನ್ನು ತೊಡಗಿಸಿ ಬ್ಯಾಂಕಿನ ಅಭಿವೃದ್ಧಿಗೆ ಕಾರಣರಾದ ಎಲ್ಲಾ ಠೇವಣಿದಾರರಿಗೂ, ಗ್ರಾಹಕರಿಗೂ ಅಲ್ಲದೇ ವೇಳೆಗೆ ಸರಿಯಾಗಿ ಕಂತು ಮತ್ತು ಬಡ್ಡಿ ಪಾವತಿಸುವ ಮೂಲಕ ಸಾಲ ಮರುಪಾವತಿಸಿದ ಸದಸ್ಯರುಗಳೆಲ್ಲರಿಗೂ ನಾವು ಅಭಿನಂದನೆಯನ್ನು ಸಲ್ಲಿಸುತ್ತೇವೆ.

ಈ ಕೆಳಕಂಡ ಸಂಸ್ಥೆಗಳು ನಮ್ಮ ಬ್ಯಾಂಕಿನಲ್ಲಿ ಠೇವಣಿ ಇಟ್ಟು ಬ್ಯಾಂಕಿನ ಪುರೋಭಿವೃದ್ಧಿಗೆ ಕಾರಣರಾಗಿರುತ್ತಾರೆ. ಅವರಿಗೂ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇವೆ.

ದೇವಾಂಗ ಸಂಘ, ದೇವಾಂಗ ಯೂನಿಯನ್ ಸ್ಪೋರ್ಟ್ಸ್ ಕ್ಲಬ್, ಹಂಪಿ ಹೇಮಕೂಟ, ಶ್ರೀ ಗಾಯಿತ್ರಿ ಪೀಠ ಶ್ರೀ ಶ್ರೀ ಶ್ರೀ ದಯಾನಂದಪುರಿ ಮಹಾ ಸ್ವಾಮೀಜಿ, ಶ್ರೀ ಗಾಯಿತ್ರಿ ಪೀಠ ಮಹಾ

ಸಂಸ್ಥಾನ, ಶ್ರೀ ಓಣಿ ಆಂಜನೇಯ ಸ್ವಾಮಿ ಟೆಂಪಲ್ ಟ್ರಸ್ಟ್, ಶ್ರೀ ಮಾರುತಿ ಗೃಹ ನಿರ್ಮಾಣ ಸೊಸೈಟಿ, ಮೈಸೂರು ಪವರ್‌ಲೂಂ ಸಿಲ್ಕ್ ಮ್ಯಾನುಫ್ಯಾಕ್ಚರರ್ಸ್ ಕೋ–ಆಪರೇಟಿವ್ ಸೊಸೈಟಿ ಲಿ., ಕರ್ನಾಟಕ ರಾಜ್ಯ ಪವರ್‌ಲೂಂ ಮಾರ್ಕೆಟಿಂಗ್ ಫೆಡರೇಷನ್, ಕೆ.ಆರ್. ಶೆಟ್ಟಿಪೇಟೆ ಮರ್ಚೆಂಟ್ಸ್ ಅಸೋಸಿಯೇಟ್ಸ್, ಶ್ರೀ ವಿನಾಯಕ ವಿದ್ಯಾಸಂಸ್ಥೆ, ಅಮರಜ್ಯೋತಿ ಲೈಬ್ರರಿ, ಮೈಸೂರು ಪ್ರಾಂತೀಯ ರೇಷ್ಮೆ ಕೈಮಗ್ಗದವರ ಸಹಕಾರ ಸಂಘ, ಮುದ್ದಪ್ಪ ಬಿ.ವಿ. ವೆಂಕಟಮ್ಮ ಮುದ್ದಪ್ಪ ಸೇವಾ ಸಮಿತಿ, ಕಾಮನಗುಡಿ ಚ್ಯಾರಿಟೀಸ್, ಆಂಧ್ರ ದೇವಾಂಗ ಸಂಘ, ಮೆ:ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಕೋ–ಆಪರೇಟಿವ್ ಸೊಸೈಟಿ, ಶ್ರೀ ಜೀವ್ಹೇಶ್ವರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ., ಶ್ರೀ ಜೀವ್ಹೇಶ್ವರ ವಿದ್ಯಾಭಿವೃದ್ಧಿ ಟ್ರಸ್ಟ್, ತೊಗಟವೀರ ಸಂಘ, ಗಾಯಿತ್ರಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ, ಶ್ರೀ ವೀರಶೈವ ಸಧರ್ಮ ವರ್ಧಿನಿ ಸಂಘ, ಶ್ರೀ ರಾಮಲಿಂಗೇಶ್ವರ ಸ್ವಾಮಿ ದೇವಸ್ಥಾನ ನ್ಯಾಸ, ಶ್ರೀ ಸಿದ್ದೇಶ್ವರ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ, ಶ್ರೀ ಚೌಡೇಶ್ವರಿ ಚಾರಿಟೆಬಲ್ ಟ್ರಸ್ಟ್–ಲಕ್ಕಸಂದ್ರ, ಶ್ರೀ ಕೋದಂಡರಾಮ ಟೆಂಪಲ್ ಟ್ರಸ್ಟ್–ಪ್ರಕಾಶನಗರ, ನವಜ್ಯೋತಿ ಕನ್ನಡ ಕಲಾ ಸಂಘ–ಆನೇಕಲ್, ಶಾರದಾ ಸೇವಾಶ್ರಮ–ದೊಡ್ಡಬಳ್ಳಾಪುರ, ದಿ ಮೈಸೂರ್ ಸಿಲ್ಕ್ ಹ್ಯಾಂಡ್ ಲೂಂ ವೀವರ್ಸ್ ಅಸೋಸಿಯೇಷನ್ ಹಾಗೂ ಬ್ಯಾಂಕಿನ ಕಾರ್ಯನಿರ್ವಹಣೆಗಾಗಿ ಮತ್ತು ದಿನನಿತ್ಯದ ವ್ಯವಹಾರವು ಸುಗಮವಾಗಿ ಸಾಗಲು ಸಹಕರಿಸಿದ ಹೆಚ್.ಡಿ.ಎಫ್.ಸಿ. ಬ್ಯಾಂಕ್, ಕೋಟಕ್ ಮಹೀಂದ್ರ ಬ್ಯಾಂಕ್, ಐ.ಡಿ.ಬಿ.ಐ. ಬ್ಯಾಂಕ್, ಇಂಡಸ್‌ಇಂದ್ ಬ್ಯಾಂಕ್, ಐ.ಸಿ.ಐ.ಸಿ.ಐ. ಬ್ಯಾಂಕ್, ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್, ಅಪೆಕ್ಸ್ ಬ್ಯಾಂಕ್, ವಿಜಯ ಬ್ಯಾಂಕ್–ಗೊಟ್ಟಿಗೆರೆ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ–ಆನೇಕಲ್, ಸಿಂಡಿಕೇಟ್ ಬ್ಯಾಂಕ್–ಆನೇಕಲ್, ಆಕ್ಸಿಸ್ ಬ್ಯಾಂಕ್‌ಗಳ ಅಧಿಕಾರಿಗಳಿಗೂ ನಮ್ಮ ಹೃತ್ಪೂರ್ವಕ ವಂದನೆಗಳು.

ಕಾಲಕಾಲಕ್ಕೆ ಸೂಕ್ತ ನಿರ್ದೇಶನ ಹಾಗೂ ಮಾರ್ಗದರ್ಶನ ನೀಡುತ್ತಿರುವ ಭಾರತೀಯ ರಿಸರ್ವ್ ಬ್ಯಾಂಕಿನ ಅಧಿಕಾರಿಗಳಿಗೆ ನಾವು ಅಭಾರಿಯಾಗಿದ್ದೇವೆ. ಕಾಲಕಾಲಕ್ಕೆ ಸೂಕ್ತ ಮಾರ್ಗದರ್ಶನ ಮತ್ತು ಸಲಹೆ ನೀಡುತ್ತಿರುವ ಸಹಕಾರ ಇಲಾಖೆಯ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ಹಾಗೂ ಅಧಿಕಾರಿಗಳಾದ ಶ್ರೀ ಸುಧಾಕರ ಭಟ್‌ರವರು ಬ್ಯಾಂಕಿನ ಅಭಿವೃದ್ಧಿಗೆ ಉಪಯುಕ್ತ ಸಲಹೆಗಳನ್ನು ನೀಡಿರುತ್ತಾರೆ. ಇವರುಗಳಿಗೂ ಸಹ ನಮ್ಮ ಕೃತಜ್ಞತೆಗಳು.

2018–19ನೇ ಸಾಲಿನ ಲೆಕ್ಕ ಪತ್ರಗಳನ್ನು ಪರಿಶೀಲಿಸಿದ ಸನ್ನದು ಲೆಕ್ಕ ಪರಿಶೋಧಕರಾದ ಮೆ: ಎಂ.ಎಸ್.ಎಸ್.ವಿ. & ಕಂ.ರವರಿಗೆ ನಾವು ವಂದಿಸುತ್ತೇವೆ.

ಬ್ಯಾಂಕಿನ ಪುರೋಭಿವೃದ್ಧಿಗಾಗಿ ಸೇವೆ ಸಲ್ಲಿಸುತ್ತಿರುವ ಎಲ್ಲಾ ಸಿಬ್ಬಂದಿಗಳಿಗೂ ನಾವು ವಂದಿಸುತ್ತೇವೆ.

ಕೊನೆಯದಾಗಿ ಬ್ಯಾಂಕಿನ ಸದಸ್ಯರುಗಳು ಶಿಸ್ತು ಕಾಪಾಡಿಕೊಂಡು ಬ್ಯಾಂಕಿನ ನಿರ್ದೇಶಕ ಮಂಡಳಿಯೊಂದಿಗೆ ಮಧುರ ಸಂಬಂಧ ಇಟ್ಟುಕೊಂಡು ಬ್ಯಾಂಕಿನ ಸಂಪನ್ಮೂಲಗಳನ್ನು ಗಣನೀಯವಾಗಿ ಹೆಚ್ಚಿಸಲು ಸಹಕಾರ ನೀಡಿದ್ದಕ್ಕಾಗಿ ತಮಗೆಲ್ಲರಿಗೂ ವಂದನೆಯನ್ನು ಅರ್ಪಿಸುತ್ತಿದ್ದೇವೆ.

**ನಿರ್ದೇಶಕ ಮಂಡಳಿ ಅಪ್ಪಣೆ ಮೇರೆಗೆ,**
**ಸಹಿ/–**
**ಡಿ. ಸಂಜೀವಣ್ಣ**
**ಮುಖ್ಯ ಕಾರ್ಯನಿರ್ವಾಹಕರು (ಪ್ರ).**

**ವಿಷಯ 7: 2018–19ನೇ ಸಾಲಿಗೆ ಬಡ್ಜೆಟ್ ಮಂಜೂರಾತಿಗಿಂತ ಹೆಚ್ಚುವರಿ ಖರ್ಚಾಗಿರುವ ಬಾಬತ್ತಿನ ಅನುಮೋದನೆ.**

| ಕ್ರಮ ಸಂಖ್ಯೆ | ವಿವರ | 2018–19ಕ್ಕೆ ಮಂಜೂರಾದದ್ದು | 2018–19ಕ್ಕೆ ಖರ್ಚಾದದ್ದು | ಹೆಚ್ಚುವರಿ |
|---|---|---|---|---|
| 1 | ಲೇಖನ ಸಾಮಗ್ರಿ ಮತ್ತು ಮುದ್ರಣ | 10,00,000.00 | 13,13,382.87 | 3,13,382.87 |
| 2 | ಇತರೇ ಖರ್ಚು | 10,00,000.00 | 10,03,774.56 | 3,774.56 |
| 3 | ಸಿಬ್ಬಂದಿ ಗ್ರಾಚ್ಯುಯಿಟಿ | 25,00,000.00 | 40,00,000.00 | 15,00,000.00 |
| 4 | ಲೆಕ್ಕಪರಿಶೋಧನಾ ಶುಲ್ಕ | 4,00,000.00 | 4,32,250.00 | 32,250.00 |

1. ಶಾಸನ ಬದ್ಧ ಲೆಕ್ಕ ಪರಿಶೋಧಕರು ಹಾಲಿ ದಾಸ್ತಾನು ಇರುವ ಉಳಿತಾಯ/ಚಾಲ್ತಿ ಖಾತೆಯ ಸಿಟಿಎಸ್ ಚೆಕ್ ಪುಸ್ತಕ, ಪೇ ಆರ್ಡರ್ ಮತ್ತು ಠೇವಣಿ ರಸೀತಿಗಳನ್ನು ಹೊರತುಪಡಿಸಿ ಉಳಿದೆಲ್ಲಾ ಲೇಖನ ಸಾಮಗ್ರಿಗಳನ್ನು ಮುದ್ರಣ & ಲೇಖನ ಸಾಮಗ್ರಿಗಳ ಖಾತೆಗೆ ವರ್ಗಾಯಿಸಲು ಸೂಚಿಸಿದ್ದರ ಮೇರೆಗೆ ಖರ್ಚು ಹೆಚ್ಚಾಗಿರುತ್ತದೆ.

2. ಬ್ಯಾಂಕಿನ ವಹಿವಾಟು ಹೆಚ್ಚಾದ ಕಾರಣ ಇತರೇ ಖರ್ಚು ಸ್ವಲ್ಪ ಹೆಚ್ಚಾಗಿರುತ್ತದೆ

3. ಭಾರತೀಯ ರಿಸರ್ವ್ ಬ್ಯಾಂಕಿನ ತಪಾಸಣಾ ವರದಿಯಲ್ಲಿ ಸೂಚಿಸಿರುವ ಮೇರೆಗೆ ಕೊರತೆಯಿದ್ದ ಗ್ರಾಚ್ಯುಯಿಟಿ ಮೊತ್ತವನ್ನು ಕಾಯ್ದಿರಿಸಿದ ಕಾರಣ ಖರ್ಚು ಹೆಚ್ಚಾಗಿರುತ್ತದೆ.

4. ಶಾಸನಬದ್ಧ ಲೆಕ್ಕ ಪರಿಶೋಧನಾ ಶುಲ್ಕದ ಜೊತೆಗೆ ಆದಾಯ ತೆರಿಗೆ ಲೆಕ್ಕಪರಿಶೋಧನಾ ಶುಲ್ಕ ಪಾವತಿಸಿರುವುದರಿಂದ ಖರ್ಚು ಹೆಚ್ಚಾಗಿರುತ್ತದೆ.

**ವಿಷಯ 8: 2018–19ನೇ ಸಾಲಿನ ನಿವ್ವಳ ನಫೆ ವಿಲೇವಾರಿ ಮತ್ತು ಲಾಭಾಂಶ (ಡಿವಿಡೆಂಡ್) ಘೋಷಣೆಗೆ ಮಂಜೂರಾತಿ ನೀಡುವುದು.**

| ಕ್ರ. ಸಂ. | ವಿವರ | ರೂ. ಪೈ. | ರೂ. ಪೈ. |
|---|---|---|---|
| | 2018–19ನೇ ಸಾಲಿನ ನಿವ್ವಳ ಲಾಭದ ಮೊತ್ತ * | | **2,48,92,255.54** |
| | 2018–19ನೇ ಸಾಲಿನ ತಾಳೆ ಮಾಡಿದ ಸ್ಟಾಂಡರ್ಡ್ ಸಾಲದ ಮೇಲಿನ ನಿವ್ವಳ ಬಡ್ಡಿ ಮೊತ್ತ* | | 11,50,273.00 |
| | 2018–19ನೇ ಸಾಲಿನ ಒಟ್ಟು ವಿಲೇವಾರಿಯ ಮೊತ್ತ | | 2,60,42,528.54 |
| 1 | ಆಪದ್ಧನ ನಿಧಿಗೆ ಶೇ.25 | 65,10,632.00 | 1,95,31,896.54 |
| 2 | ಸಹಕಾರ ವಿದ್ಯಾಭ್ಯಾಸ ನಿಧಿ. ಶೇ.2 | 3,90,638.00 | 1,91,41,258.54 |
| 3 | ಕರ್ನಾಟಕ ರಾಜ್ಯ ಪಟ್ಟಣ ಸಹಕಾರಿ ಬ್ಯಾಂಕುಗಳ ಮಹಾಮಂಡಳ ಅಭಿವೃದ್ದಿ ಕಾರ್ಯಕ್ಕೆ ಶೇ.1 | 1,91,413.00 | 1,89,49,845.54 |
| 4 | ಹೂಡಿಕೆಗಳ ಏರಿಳಿತ ನಿಧಿ | 53,00,000.00 | 1,36,49,845.54 |
| 5 | ಸದಸ್ಯರುಗಳ ಮರಣ ಸಹಾಯಾರ್ಥ ನಿಧಿ | 10,00,000.00 | 1,26,49,845.54 |
| 6 | ವಿದ್ಯಾರ್ಥಿ ಪ್ರೋತ್ಸಾಹ ನಿಧಿ | 3,00,000.00 | 1,23,49,845.54 |
| 7 | ಧರ್ಮದ ನಿಧಿ | 2,00,000.00 | 1,21,49,845.54 |
| 8 | ಸದಸ್ಯರ ಕ್ಷೇಮಾಭಿವೃದ್ಧಿ ನಿಧಿ | 10,50,000.00 | 1,10,99,845.54 |
| 9 | ಸಿಬ್ಬಂದಿ ಬೋನಸ್ | 42,18,511.00 | 68,81,334.54 |
| 10 | ಷೇರು ಡಿವಿಡೆಂಡು ವಿತರಣಾ ನಿಧಿ ಶೇ.9 | 68,78,301.00 | 3,033.54 |
| | ಒಟ್ಟು | 2,60,39,495.00 | |
| | ಉಳಿಕೆ ಮೊತ್ತ ಆಪದ್ದನ ನಿಧಿಗೆ | 3,033.54 | |
| | **ಒಟ್ಟು** | **2,60,42,528.54** | |

(ಲಾಭ–ನಷ್ಟ ತಃಖ್ತೆ ಪ್ರಕಾರ) *

* * * *

**ವಿಷಯ 9: 2019–20ನೇ ಸಾಲಿಗೆ ಬಜೆಟ್ ಮಂಜೂರಾತಿ ಪಟ್ಟಿಯನ್ನು ಅಂಗೀಕರಿಸುವುದು.**

| ಕ್ರ ಸಂ. | ವಿವರ | 2018–19ನೇ ಸಾಲಿಗೆ ಶಿಫಾರಸ್ಸು | 2018–19ನೇ ಸಾಲಿಗೆ ತಗುಲಿದ ವೆಚ್ಚ | 2019–20ನೇ ಸಾಲಿಗೆ ಶಿಫಾರಸ್ಸು |
|---|---|---|---|---|
| 1 | ಠೇವಣಿಗಳ ಮತ್ತು ಸಾಲಗಳ ಮೇಲಿನ ಬಡ್ಡಿ | 19,50,00,000.00 | 18,42,09,180.00 | 19,50,00,000.00 |
| 2 | ಸಿಬ್ಬಂದಿ ಸಂಬಳ ಪಿಎಫ್ ವಗೈರೆ | 4,50,00,000.00 | 4,11,53,358.00 | 5,20,00,000.00 |
| 3 | ಅಂಚೆ, ತಂತಿ, ದೂರವಾಣಿ | 6,00,000.00 | 4,28,958.13 | 6,00,000.00 |
| 4 | ಬಾಡಿಗೆ, ತೆರಿಗೆ, ವಿದ್ಯುಚ್ಛಕ್ತಿ, ಇತರೇ | 75,00,000.00 | 73,44,015.90 | 80,00,000.00 |
| 5 | ಲೇಖನ ಸಾಮಗ್ರಿ ಮತ್ತು ಮುದ್ರಣ | 10,00,000.00 | 13,13,382.87 | 10,00,000.00 |
| 6 | ನಿರ್ದೇಶಕರ ಸಭೆ ಖರ್ಚು | 3,00,000.00 | 94,011.00 | 3,00,000.00 |
| 7 | ಸಮಾರಂಭ | 5,00,000.00 | 3,63,614.55 | 5,00,000.00 |
| 8 | ಇತರೇ ಖರ್ಚು | 10,00,000.00 | 10,03,774.56 | 12,00,000.00 |
| 9 | ಸರ್ವಸದಸ್ಯರ ಸಭೆ ಖರ್ಚು | 50,00,000.00 | 44,81,729.57 | 30,00,000.00 |
| 10 | ಜಾಹೀರಾತು | 6,00,000.00 | 2,38,161.00 | 6,00,000.00 |
| 11 | ವಿಮೆ ಕಂತು (ಬ್ಯಾಂಕು ಪಾಲಿಸಿ ಮತ್ತು ಠೇವಣಿ) | 55,00,000.00 | 45,52,997.15 | 55,00,000.00 |
| 12 | ಸಾರಿಗೆ ವೆಚ್ಚ/ತರಬೇತು/ಪ್ರಯಾಣ | 2,50,000.00 | 92,038.00 | 2,50,000.00 |
| 13 | ಸಂಘ ಸಂಸ್ಥೆಗಳ ನೊಂದಣಿ ಮತ್ತು ವಾರ್ಷಿಕ ಶುಲ್ಕ | 4,00,000.00 | 1,50,780.00 | 4,00,000.00 |
| 14 | ಕಾನೂನು ವೆಚ್ಚ | 7,00,000.00 | 5,47,425.00 | 10,00,000.00 |
| 15 | ಮರಮುಟ್ಟುಗಳು, ವಾಹನ, ಗಣಕಯಂತ್ರ ಇಳುವರಿ | 40,00,000.00 | 31,73,171.00 | 35,00,000.00 |
| 16 | ಕಲ್ಪತರು ಏಜೆಂಟರ ಕಮೀಷನ್ | 11,00,000.00 | 9,89,909.00 | 11,00,000.00 |
| 17 | ವಾಹನ ರಿಪೇರಿ, ನಿರ್ವಹಣೆ | 4,00,000.00 | 3,67,607.00 | 4,00,000.00 |
| 18 | ನಿರ್ದೇಶಕರ ಸಭಾ ಭತ್ಯೆ | 12,00,000.00 | 6,58,500.00 | 13,50,000.00 |
| 19 | ಗಣಕಯಂತ್ರಗಳ ನಿರ್ವಹಣೆ | 4,00,000.00 | 1,70,402.23 | 4,00,000.00 |
| 20 | ಇತರೇ ಯಂತ್ರಗಳ ನಿರ್ವಹಣೆ | 5,00,000.00 | 2,73,294.50 | 4,00,000.00 |
| 21 | ಸಾಫ್ಟ್‌ವೇರ್ ಖರ್ಚು (ಸಿಬಿಎಸ್, ಎಟಿಎಂ & ಇತರೇ) | 30,00,000.00 | 21,78,079.00 | 55,00,000.00 |
| 22 | ಸಿಬ್ಬಂದಿ ಗ್ರಾಚುಯಿಟಿ | 25,00,000.00 | 40,00,000.00 | 40,00,000.00 |
| 23 | ಸಮವರ್ತಿ ಲೆಕ್ಕ ಮತ್ತು ಇಡಿಪಿ ಶುಲ್ಕ | 16,50,000.00 | 12,41,600.00 | 13,00,000.00 |
| 24 | ಲೆಖ್ಖ ಪರಿಶೋಧನಾ ಶುಲ್ಕ | 4,00,000.00 | 4,32,250.00 | 13,00,000.00 |
| 25 | ಕಛೇರಿ ನಿರ್ವಹಣೆ / ಪಾಲನೆ | 45,00,000.00 | 38,12,726.88 | 45,00,000.00 |
| 26 | ಎಂ.ಐ.ಸಿ.ಆರ್.ಖರ್ಚು | 6,00,000.00 | 3,90,922.01 | 5,00,000.00 |
| 27 | ಡಿಜಿಟಲ್ ಸಹಿ ಖರ್ಚು | 15,000.00 | 13,000.00 | 20,000.00 |
| 28 | ಸಾಲಗಳ ಮೇಲಿನ ಬಡ್ಡಿ ರಿಯಾಯಿತಿ | 35,00,000.00 | 26,37,614.00 | 30,00,000.00 |
| 29 | ಎ. ಟಿ. ಎಂ. ಖರ್ಚು | 8,00,000.00 | – | – |
| 30 | ಅಪ್ರೈಸರ್ ಶುಲ್ಕ ಪಾವತಿಸಿದ್ದು | 50,000.00 | – | – |
| | **ಒಟ್ಟು** | **28,79,65,000.00** | **26,63,12,501.35** | **29,66,20,000.00** |

**2018-19ನೇ ಸಾಲಿಗೆ ನಿರೀಕ್ಷಿಸುವ ಅಂದಾಜು ವರಮಾನ**

| ಕ್ರಮ ಸಂಖ್ಯೆ | ವಿವರ | 2018-19ಕ್ಕೆ ಬಂದಿರುವ ವರಮಾನ | 2019-20ನೇ ಸಾಲಿನಲ್ಲಿ ನಿರೀಕ್ಷಣೆ |
|---|---|---|---|
| 1 | ಸಾಲಗಳ ಮೇಲಿನ ಬಡ್ಡಿ | 15,73,14,887.00 | 19,90,00,000.00 |
| 2 | ಹೂಡಿಕೆಗಳ ಮೇಲೆ ಬಡ್ಡಿ | 12,73,92,179.44 | 11,22,00,000.00 |
| 3 | ಕಮೀಷನ್ ವಗೈರೆ | 99,55,249.89 | 1,30,00,000.00 |
| 4 | ಇತರೇ | 32,72,325.84 | 10,00,000.00 |
| | **ಜುಮ್ಲಾ** | **29,49,34,642.17** | **32,52,00,000.00** |

| | | |
|---|---|---|
| 1 | 2019-20ನೇ ಸಾಲಿಗೆ ನಿರೀಕ್ಷಿಸುವ ಅಂದಾಜು ವರಮಾನ | 32,52,00,000.00 |
| 2 | 2019-20ನೇ ಸಾಲಿಗೆ ನಿಯಮಾನುಸಾರ ಈ ಕೆಳಕಂಡಂತೆ ಕಾದಿರಿಸುವುದು. | |
| | ಅ) ಹೂಡಿಕೆಗಳ ಮೇಲೆ ಕಾದಿರಿಸುವುದು | 9,00,000.00 |
| | | **32,43,00,000.00** |
| 3 | 2019-20ನೇ ಸಾಲಿಗೆ ಅಂದಾಜು ಖರ್ಚು | 29,66,20,000.00 |
| | | 2,76,80,000.00 |
| 4 | ವರಮಾನ ತೆರಿಗೆ | 94,11,200.00 |
| 5 | 2019-20ನೇ ಸಾಲಿಗೆ ನಿರೀಕ್ಷಿಸುವ ನಿವ್ವಳ ಲಾಭ | 1,82,68,800.00 |

**ವಿಷಯ 10: 2019-20ನೇ ಸಾಲಿಗೆ ಲೆಕ್ಕ ಪರಿಶೋಧನೆಗೆ, ಲೆಕ್ಕ ಪರಿಶೋಧಕರನ್ನು ನೇಮಿಸುವುದು ಹಾಗೂ ಅವರುಗಳ ಸಂಭಾವನೆ ನಿಗಧಿಪಡಿಸುವುದು.**

ದಿನಾಂಕ:24.07.2019 ರಂದು ನಡೆದ ನಿರ್ದೇಶಕ ಮಂಡಳಿ ಸಭೆಯಲ್ಲಿ ಚರ್ಚಿಸಿ M/s. MSSV & CO (ಸರ್ಕಾರದ ಎಂಪ್ಯಾನಲ್‌ಮೆಂಟ್‌ನಲ್ಲಿರುವವರು) ಮುಂದಿನ 2019-20ನೇ ಸಾಲಿಗೆ ಬ್ಯಾಂಕಿನ ಲೆಕ್ಕ ಪತ್ರಗಳ ಪರಿಶೋಧನೆಗೆ ನೇಮಕ ಮಾಡಲು ಸರ್ವಸದಸ್ಯರ ಸಭೆಯ ಅನುಮೋದನೆಗಾಗಿ ಶಿಫಾರಸ್ಸು ಮಾಡಿದೆ. ಲೆಕ್ಕ ಪರಿಶೋಧಕರ ಸಂಭಾವನೆಯನ್ನು ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ನಿರ್ದೇಶಕರು ಕಾಲಕಾಲಕ್ಕೆ ಹೊರಡಿಸುವ ಮಾರ್ಗಸೂಚಿಯ ಅನ್ವಯ ನೀಡಲು ಶಿಫಾರಸ್ಸು ಮಾಡಿ ಸರ್ವಸದಸ್ಯರ ಸಭೆಯ ಅನುಮೋದನೆಗೆ ಮಂಡಿಸಿದೆ.

**ವಿಷಯ 12: ಬ್ಯಾಂಕಿನ ಮುಂಬರುವ ಕಾರ್ಯಚಟುವಟಿಕೆಗಳ ಬಗ್ಗೆ ಆಡಳಿತ ಮಂಡಳಿಯ ರೂಪುರೇಷೆ :**

**2019-20ರ ವಾರ್ಷಿಕ ಸಾಲಿಗೆ ನಮ್ಮ ನಿರ್ದೇಶಕರ ಮಂಡಳಿಯು ಕೆಳಕಂಡ ಗುರಿಗಳನ್ನು ಹೊಂದಿರುತ್ತದೆ.**

ಅ) ಬ್ಯಾಂಕಿನ ಒಟ್ಟಾರೆ ಠೇವಣಿ ಸಂಗ್ರಹದ ಗುರಿ ರೂ. 300.00 ಕೋಟಿ.

ಆ) ಬ್ಯಾಂಕಿನ ಒಟ್ಟಾರೆ ಸಾಲ ಮುಂಗಡಗಳ ಗುರಿ ರೂ. 180.00 ಕೋಟಿ.

ಇ) ಸದಸ್ಯರ ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳನ್ನು ಉದಾ: ಬುಕ್‌ಬ್ಯಾಂಕ್ ಸೇವೆಯನ್ನು ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರವನ್ನು ಹೆಚ್ಚು ಹೆಚ್ಚು ನೀಡಲು ಕ್ರಮವಿಡುವುದು.

ಈ) ಬ್ಯಾಂಕು ಸ್ವಂತ ಕಟ್ಟಡಗಳನ್ನು ಹೊಂದುವ ಗುರಿ ಇಟ್ಟುಕೊಂಡಿದ್ದು, ಅದೇ ಪ್ರಕಾರವಾಗಿ ಸ್ವಂತ ಕಟ್ಟಡವನ್ನು ಮುಂದಿನ ದಿನಗಳಲ್ಲಿ ಆನೇಕಲ್‌ನಲ್ಲಿ ನಿರ್ಮಿಸುವುದು.

ಉ) ಸರ್ಕಾರದ ಆದೇಶದಂತೆ ಶೇ.1 ಹಾಗೂ ಶೇ.3ರ ಬಡ್ಡಿದರದ ನೇಕಾರಿಕೆ ಸಾಲಗಳನ್ನು ಮುಂದುವರೆಸುವುದು.

ಊ) ಆಯಾ ಶಾಖಾ ಸ್ಥಳಗಳಲ್ಲಿಯೇ ಸದಸ್ಯರುಗಳಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸುವುದು.

ಋ) Rupay Debit Cardನ ಮುಖಾಂತರ ಎ.ಟಿ.ಎಂ. ಸೌಲಭ್ಯಗಳನ್ನು ಹೊಂದಲು ವ್ಯವಸ್ಥೆ ಮಾಡುವುದು.

ಎ) ಹೊಸದಾಗಿ ಪ್ರಾರಂಭಗೊಂಡಿರುವ 04 ಶಾಖೆಗಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುವುದು.

**ವಿಷಯ 13: ಬ್ಯಾಂಕಿನ ಅಧಿಕೃತ ಷೇರು ಬಂಡವಾಳಕ್ಕೆ ಸಭೆಯು ನೀಡಿದ್ದ ಅನುಮತಿಯನ್ನು ಮುಂದುವರಿಸುವ ಬಗ್ಗೆ.**

ಹಿಂದಿನ ಸರ್ವಸದಸ್ಯರ ಸಭೆಯಲ್ಲಿ ಅಧಿಕೃತ ಷೇರು ಬಂಡವಾಳವನ್ನು ರೂ.20.00 ಕೋಟಿಗೆ ಅನುಮೋದನೆ ಪಡೆಯಲಾಗಿದ್ದು, ಪ್ರಸಕ್ತ ಸಾಲಿಗೆ ಅದನ್ನು ಮುಂದುವರೆಸಿಕೊಂಡು ಹೋಗಲು ಆಡಳಿತ ಮಂಡಳಿ ಶಿಫಾರಸ್ಸು ಮಾಡಿ ಸರ್ವಸದಸ್ಯರ ಅನುಮೋದನೆ ಕೋರಲಾಗಿದೆ.

**ವಿಷಯ 14: ಬ್ಯಾಂಕಿನ ನಿರ್ದೇಶಕರುಗಳಿಗೆ, ಅವರ ಹತ್ತಿರ ಸಂಬಂಧಿಗಳಿಗೆ ಮತ್ತು ಅವರ ಹಿತಾಸಕ್ತಿ ಇರುವ ಸಂಸ್ಥೆಗಳಿಗೆ ನೀಡಿದ್ದ ಸಾಲಗಳು ಮತ್ತು ಇದರ ಸುಸ್ತಿ ಸಾಲಗಳು ಏನಾದರೂ ಇದ್ದಲ್ಲಿ ಅವುಗಳ ವಸೂಲಾತಿಗೆ ತೆಗೆದುಕೊಂಡ ಕ್ರಮಗಳ ಪರಿವೀಕ್ಷಣೆ.**

ಪ್ರಸಕ್ತ ಸಾಲಿನಲ್ಲಿ ಚುನಾಯಿತರಾದ ನಿರ್ದೇಶಕರುಗಳ ಹತ್ತಿರದ ಸಂಬಂಧಿಕರುಗಳಿಗಾಗಲಿ ಅಥವಾ ಅವರ ಹಿತಾಸಕ್ತಿ ಇರುವ ಸಂಸ್ಥೆಗಳಿಗಾಗಲಿ ಯಾವುದೇ ರೀತಿಯ ಸಾಲವನ್ನು (ರಿಸರ್ವ್ ಬ್ಯಾಂಕಿನ ಸುತ್ತೋಲೆಯಂತೆ) ಮಂಜೂರು ಮಾಡಿರುವುದಿಲ್ಲ. ದಿನಾಂಕ 25.07.2018ರಂದು ಹೊಸ ನಿರ್ದೇಶಕ ಮಂಡಳಿಯು ಅಸ್ಥಿತ್ವಕ್ಕೆ ಬಂದಿದ್ದು ಹಾಲಿ ನಿರ್ದೇಶಕ ಮಂಡಳಿಯಲ್ಲಿರುವ ನಿರ್ದೇಶಕರಾದ ಶ್ರೀ ಪಿ. ದೇವರಾಜುರವರ ಸಹೋದರರಾದ ಶ್ರೀ ಪಿ. ಶಂಕರ್ ಹಾಗೂ ಶ್ರೀ ಪಿ. ಶಂಕರ್‌ರವರ ಪತ್ನಿ ಶ್ರೀಮತಿ ಗಿರಿಜಾರವರುಗಳು ತಲಾ ರೂ. 8.00 ಲಕ್ಷದಂತೆ ದಿನಾಂಕ 20.02.2018 ರಂದು ಸಾಲ ಪಡೆದಿದ್ದು ಸದರಿ ಸಾಲದ ಖಾತೆಗಳು ಫೆಬ್ರವರಿ 2019ರಿಂದ ಸುಸ್ತಿಯಾಗಿರುತ್ತದೆ. ಸುಸ್ತಿ ಸಾಲದ ವಸೂಲಾತಿಗೆ ಬ್ಯಾಂಕು ಕ್ರಮವಿಟ್ಟಿರುತ್ತದೆ. ಮತ್ತು ಶ್ರೀ ಪಿ. ದೇವರಾಜುರವರು ಮತ್ತೊಬ್ಬ ಸಹೋದರರಾದ ಶ್ರೀ ಪಿ. ಶಂಕರ್‌ಕುಮಾರ್‌ರವರು ದಿನಾಂಕ 31.03.2015 ರಂದು ರೂ. 5,00,000/– ಸಾಲ ಪಡೆದಿದ್ದು ಸಾಲದ ಖಾತೆಯು ಸುಸ್ತಿಯಲ್ಲಿರುತ್ತದೆ.

**ವಿಷಯ 15: ನಿರ್ದೇಶಕರು ಬ್ಯಾಂಕಿನ ಸೇವೆಗಳನ್ನು ಉಪಯೋಗಿಸಿಕೊಂಡಿರುವುದರ ಬಗ್ಗೆ ಅವಲೋಕಿಸುವುದು.**

ಪ್ರಸಕ್ತ ಸಾಲಿನ ಆಡಳಿತ ಮಂಡಳಿಯ ನಿರ್ದೇಶಕರು ಬ್ಯಾಂಕಿನ ವಿವಿಧ ಸೇವೆಗಳಾದ ಉಳಿತಾಯ/ ರೆಕರಿಂಗ್ / ನಿಶ್ಚಿತ ಅವಧಿ ಠೇವಣಿ ಖಾತೆಗಳನ್ನು ಹೊಂದಿರುತ್ತಾರೆ.

## ಟೆಕ್ಸ್‌ಟೈಲ್ ಕೋ ಆಪರೇಟಿವ್ ಬ್ಯಾಂಕ್ ಲಿಮಿಟೆಡ್

**ವಿಷಯ 16: ಬ್ಯಾಂಕಿನ ಉಪ ನಿಯಮಗಳಿಗೆ ಮಾಡಬೇಕಾದ ತಿದ್ದುಪಡಿಗಳ ಅನುಮೋದನೆ**

| ಕ್ರಮ ಸಂಖ್ಯೆ | ಬೈಲಾ ಸಂಖ್ಯೆ | ಹಾಲಿ ಇರುವ ನಿಯಮ | ತಿದ್ದುಪಡಿಸಿದ ನಿಯಮ | ಕಾರಣ |
|---|---|---|---|---|
| 1 | ಅದ್ಯಾಯ<br>10<br>59 | **ನಿರ್ದೇಶಕ ಮಂಡಳಿಯ ಸಭೆಗಳಿಗೆ ಗೈರುಹಾಜರಿ:**<br>ಯಾವುದೇ ನಿರ್ದೇಶಕರು ನಿರ್ದೇಶಕ ಮಂಡಳಿಯ ಸಭೆಗಳಿಗೆ ಹಾಜರಾಗಲು ಸಾಧ್ಯವಿಲ್ಲದಿದ್ದಲ್ಲಿ ಹಾಗೆ ಗೈರು ಹಾಜರು ಆಗುವ ಬಗ್ಗೆ ಲಿಖಿತ ಕೋರಿಕೆಯನ್ನು ಸಲ್ಲಿಸಿ ಆಡಳಿತ ಮಂಡಳಿಯ ಅನುಮತಿಯನ್ನು ಪಡೆಯತಕ್ಕದ್ದು. ನಿರ್ದೇಶಕ ಮಂಡಳಿಯ ಅನುಮತಿ ಇಲ್ಲದೆ ಯಾವ ನಿರ್ದೇಶಕನಾದರೂ ಅನುಕ್ರಮವಾಗಿ ಮೂರು ಸಭೆಗಳಿಗೆ ಗೈರು ಹಾಜರಾದಲ್ಲಿ ಅವರು ನಿರ್ದೇಶಕರಾಗಿ ಮುಂದುವರಿಯುವಂತಿಲ್ಲ. ಅಂತಹ ಸದಸ್ಯರನ್ನು ನಿರ್ದೇಶಕ ಮಂಡಳಿಯಿಂದ ತೆಗದು ಹಾಕುವ ಕ್ರಮ ಕೈಗೊಳ್ಳಲು ಗೈರು ಹಾಜರಿಯನ್ನು ನಿಬಂಧಕರಿಗೆ ವರದಿ ಮಾಡತಕ್ಕದ್ದು | ಯಾವುದೇ ನಿರ್ದೇಶಕರು ನಿರ್ದೇಶಕ ಮಂಡಳಿಯ ಸಭೆಗಳಿಗೆ ಹಾಜರಾಗಲು ಸಾಧ್ಯವಿಲ್ಲದಿದ್ದಲ್ಲಿ ಹಾಗೆ ಗೈರು ಹಾಜರು ಆಗುವ ಬಗ್ಗೆ ಮೌಖಿಕವಾಗಿ/ ದೂರವಾಣಿ ಮೂಲಕ/ ಇ–ಮೇಲ್ ಮೂಲಕ ಅಥವಾ ಲಿಖಿತ ಕೋರಿಕೆಯನ್ನು ಸಲ್ಲಿಸಿ ಆಡಳಿತ ಮಂಡಳಿಯ ಅನುಮತಿಯನ್ನು ಪಡೆಯತಕ್ಕದ್ದು. ನಿರ್ದೇಶಕ ಮಂಡಳಿಯ ಅನುಮತಿ ಇಲ್ಲದೆ ಯಾವ ನಿರ್ದೇಶಕರಾದರೂ ಅನುಕ್ರಮವಾಗಿ ಮೂರು ಸಭೆಗಳಿಗೆ ಗೈರು ಹಾಜರಾದಲ್ಲಿ ಅವರು ನಿರ್ದೇಶಕರಾಗಿ ಮುಂದುವರಿಯುವಂತಿಲ್ಲ. ಅಂತಹ ಸದಸ್ಯರನ್ನು ನಿರ್ದೇಶಕ ಮಂಡಳಿಯಿಂದ ತೆಗದು ಹಾಕುವ ಕ್ರಮ ಕೈಗೊಳ್ಳಲು ಗೈರುಹಾಜರಿಯನ್ನು ನಿಬಂಧಕರಿಗೆ ವರದಿ ಮಾಡತಕ್ಕದ್ದು. | ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯಿದೆ 1959 ಕಲಂ 29–1 (ಪಿ)ರಂತೆ ಅಳವಡಿಸಿಕೊಳ್ಳುವುದು |